₹ 5/-

# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** **Vol XXXIV - 2** **February 2016**

**PAGES 16**




## ಮೈಸೂರು ಅಸೋಸಿಯೇಶನ್‌ನಲ್ಲಿ ಡಾ. ಜಯಂತ್ ಕಾಯ್ಕಿಣಿಯವರಿಂದ ದತ್ತಿ ಉಪನ್ಯಾಸ

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

# ಬಂಗಾರ ಹಬ್ಬದ ದತ್ತಿ ಉಪನ್ಯಾಸ ಕಾರ್ಯಕ್ರಮ






ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆಯು ಅತ್ಯಂತ ಜನಪ್ರಿಯ ಪ್ರಕಾರವಾಗಿ ಬೆಳೆಯುತ್ತಾ ಬಂದಿದೆ. ತಮ್ಮ ಸಣ್ಣ ಕಥೆಗಳ ಮೂಲಕ ಕನ್ನಡ ಸಾಹಿತ್ಯಲೋಕಕ್ಕೆ ಚಿರಪರಿಚಿತರಾಗಿರುವವರು ಡಾ। ಜಯಂತ ಕಾಯ್ಕಿಣೀಯವರು. ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಮತ್ತು ಮೈಸೂರು ಅಸೋಸಿಯೇಷನ್ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಜನವರಿ 16 ಮತ್ತು 17 ಎರಡು ದಿನ ಬಂಗಾರದ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆದಿತ್ತು.

ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದ ಖ್ಯಾತ ಸಾಹಿತಿ ಜಯಂತ್ ಕಾಯ್ಕಿಣಿಯವರು "ಕುವೆಂಪು – ಕವಿ ನೆನಪಿನ ಸವಿಯಾನ"ವನ್ನು ಮೊದಲ ದಿವಸ ಸೊಗಸಾಗಿ ಮನಮುಟ್ಟುವಂತೆ ಮಾಡಿದರು. ಕುವೆಂಪುರವರ ವ್ಯಕ್ತಿತ್ವ, ಅವರ ರುಚಿಶುದ್ಧಿ, ಅವರ ಆಸಕ್ತಿ, ಅವರ ಮನೋಧರ್ಮ ಒಟ್ಟು ಅವರ ಸಾಹಿತ್ಯ ಚಿಂತನ ಮುಖಾಂತರವಾಗಿ ಕನ್ನಡ ಸಾಹಿತ್ಯದ ಹಿರಿಮೆ ಗರಿಮೆ ಎಲ್ಲವನ್ನು ನಮ್ಮ ಮುಂಡೆ ತೆರೆದು ಇಟ್ಟಿದ್ದರು.

ಡಾ। ಮಮತಾರಾಅವ್ ಅವರ "ಜಯಂತ ಕಾಯ್ಕಿಣೀ ಅವರ ಕಥನಾವರಣ" ಕೃತಿಯನ್ನು ಡಾ।ವ್ಯಾಸರಾಯ ನಿಂಜೂರು ಮತ್ತು ಡಾ। ಜಯಂತ್ ಕಾಯ್ಕಿಣೀಯವರು ಬಿಡುಗಡೆಗೊಳಿಸಿದರು. "ನಾನು ಮತ್ತು ನನ್ನ ಸಾಹಿತ್ಯ"ದ ಬಗ್ಗೆ ಜಯಂತ್ ಕಾಯ್ಕಿಣಿಯವರು ಮಾತನಾಡುತ್ತಾ "ನಾನು ಎಂದೂ ಕಥೆಯನ್ನು ಬರೆಯಬೇಕೆಂದು ಬರೆದವನಲ್ಲ, ದೈನಂದಿನ ಚಟುವಟಿಕೆಗಳಲ್ಲಿ ಸಿಗುವ ವಸ್ತುಗಳೇ ಕೆಲವೊಮ್ಮೆ ಕಥೆಯಾಗಿ ಮಾರ್ಪಾಡುಗೊಳ್ಳುತ್ತಿತ್ತು. ನನ್ನ ತಂದೆ ಡಾ। ಗೌರೀಶ್ ಕಾಯ್ಕಿಣೀಯವರು ತೀರಿದ ನಂತರ ಅವರನ್ನು ಅವರ ಸಾಹಿತ್ಯದಿಂದ ಹುಡುಕಲು ಪ್ರಯತ್ನಿಸಿದಾಗ, ಅವರ ಸಾಹಿತ್ಯ ನನ್ನ ಮೇಲೆ ಪ್ರಭಾವ ಬೀರಿತು" ಎಂದರು.

"ಒಮ್ಮೆ ಬೆಂಗಳೂರಿಗೆ ಸಾಹಿತ್ಯ ಪರಿಷತ್ತಿನ ಸನ್ಮಾನ ಕಾರ್ಯಕ್ರಮದ ನಿಮಿತ್ತ ತಂದೆಯವರನ್ನು ಆಮಂತ್ರಿಸಿದ್ದರು. ಕ್ಷಮಿಸಿ, ನನ್ನ ವಿದ್ಯಾರ್ಥಿಯೊಬ್ಬನ ದೋಣಿಯೊಂದರ ಬಿಡುಗಡೆಯ ಕಾರ್ಯಕ್ರಮಕ್ಕೆ ಹೋಗಲು ಒಪ್ಪಿರುವುದರಿಂದ ಬರಲಾಗುವುದಿಲ್ಲ ಎಂದು ಕಾರ್ಡು ಬರೆದರು. ಅವರು ಯಾವತ್ತೂ ಸಂಘ ಸಂಸ್ಥೆಗಳ ಸನ್ಮಾನವನ್ನು ಬಯಸಿದವರಲ್ಲ. ಜಂಗಮ ಸಂಸ್ಕೃತಿಯನ್ನು ಸದಾ ಮೆಚ್ಚಿದವರು" ಎಂದು ಹೇಳುತ್ತ ತಂದೆಯವರನ್ನು ನೆನೆಸಿಕೊಂಡರು.

"ಪುಸ್ತಕದ ಆಚೆ ಬದುಕಿದೆ ಎಂದು ತಿಳಿಸಿಕೊಟ್ಟವರು ಸೋದರ ಮಾವ ವೆಂಟೇಕರ್ ಸರ್. ಪ್ರಾಥಮಿಕ ಹಂತದಲ್ಲಿಯೇ ವಿಭಿನ್ನವಾದ ಶಿಕ್ಷಣ ಶೈಲಿಯಿಂಡ ಜೀವನವನ್ನು ಹೇಗೆ ರೂಪಿಸಿಕೊಳ್ಳಬೇಕೆಂದು ಉದಾಹರಣೆ ಸಹಿತವಾಗಿ ತಿಳಿಸಿಕೊಡುತ್ತಿದ್ದರು. ಸತ್ಯ ಘಟನೆಗಳನ್ನು ತೋರಿಸುತ್ತಾ, ಅದರ ಕುರಿತು ಪ್ರಬಂಧ ಬರೆಯಲು ತಿಳಿಸಿ, ಅದಕ್ಕೆ ಮಾರ್ಕು ಕೊಡುತ್ತಿದ್ದರು. ಹಾಗೆಯೇ ವರ್ಷದ ಆರಂಭದಲ್ಲಿ ಒಂದು ಖಾಲಿ ಶೀಟು ಕೊಟ್ಟು, ವರ್ಷದ ಅಂತ್ಯದಲ್ಲಿ ಆ ಶೀಟು ಎಷ್ಟು ನೀಟಾಗಿದೆ ಅದರ ಆಧಾರದ ಮೇಲೆ ಮಾರ್ಕು ಕೊಡುತ್ತಿದ್ದರು" ಎಂದು ತನ್ನ ಗುರುಗಳು ಕಲಿಸಿಕೊಡುತ್ತಿದ್ದ ಪಾಠವನ್ನು ಮೆಲುಕು ಹಾಕಿದರು. "ಮತ್ತೆ ನಮ್ಮ ಊರಿನಲ್ಲಿ ವಾಮನ ಪೈ ಇದ್ದ, ಅವನನ್ನು ಎಲ್ಲರೂ ಮಳ್ಳ, ಹುಚ್ಚ ಎಂದು ಕರೆಯುತ್ತಿದ್ದರು. ಆದರೆ ಅವನು ಎಲ್ಲರಿಗಿಂತ ಬುದ್ಧಿವಂತ. ಪ್ರತಿದಿವಸ ಅವನು ಪೂರ್ವದಿಕ್ಕಿಗೆ ಮುಖ ಮಾಡಿ ನಿಲ್ಲು ನಿಂತಿದ್ದ. ನಂತರ ಆಕಾಶ ನೋಡಿ, "ಬಾ, ಬಾ" ಅಂದಾಗ ಸೂರ್ಯ ಬಂದು ಬಿಡೂತ್ತಿದ್ದ. ಸಂಜೆ ಸಮುದ್ರ ದಂಡೆಗೆ ಹೋಗಿ, ಹೋಗಲಿ, get out, I say go" ಎಂದು ಸೂರ್ಯ ಮುಳುಗಿತ್ತಿದ್ದ. ಇಂತಹ ಮುಗ್ಧ ಮನಸ್ಸುಗಳೇ ನನ್ನ ಸಾಹಿತ್ಯದ ಬರವಣಿಗೆಗೆ ಪ್ರೇರಣೆಯಾಯಿತು" ಎಂದು ಹೇಳಿದರು. "ನನ್ನ ಸಾಹಿತ್ಯದಲ್ಲಿ, ಕಥೆಗಳಲ್ಲಿ, ಆಸ್ಪತ್ರೆಯ ಬಗ್ಗೆ ಹೆಚ್ಚು ಹೇಳಿರುತ್ತೇನೆ. ಯಾಕೆಂದರೆ ಒಬ್ಬ ವ್ಯಕ್ತಿಯ ನೋವನ್ನು, ಇನ್ನೊಬ್ಬ ವ್ಯಕ್ತಿ ಅರ್ಥ ಮಾಡಿಕೊಳ್ಳುವುದು ಆಸ್ಪತ್ರೆಯಲ್ಲಿ ಮಾತ್ರ ಸಾಧ್ಯ. ಅದು ನನಗೆ spiritual place ಆಗಿದೆ. ನನಗೆ ಕಾದಾಂಬರಿ, ಬರೆಯಬೇಕೆಂಬ ಕನಸು, ಇದೆ. ಆ ಸಾಧನೆಯನ್ನು ಕೂಡಾ ಮುಂದೆ ಮಾಡುವೆ" ಎಂದು ಜಯಂತರು ತಮ್ಮ ಗುಣಾತ್ಮಕ್ಕೆ ಅಭಿಪ್ರಯವನ್ನು ವ್ಯಕ್ತಪಡಿಸಿದರು.

"ಸಿನಿಮಾ ರಂಗದಲ್ಲಿ ಡಾ। ರಾಜಕುಮಾರರ ವ್ಯಕ್ತಿತ್ವ ನನ್ನ ಮೇಲೆ ತುಂಬಾ ಪ್ರಭಾವ ಬೀರಿತು. ಸಿನಿಮಾ ಗೀತೆಗಳನ್ನು ಬರೆಯುವುದು ತುಂಬಾ ಕಷ್ಟದ ಕೆಲಸ. ಇನ್ನೂ ಅನುವಾದ ಕೆಲಸವನ್ನು ಸ್ವಲ್ಪ ಮಟ್ಟಿಗೆ ಮಾಡಿರುವೆ. ಮರಾಠಿಯಿಂದ ಕನ್ನಡಕ್ಕೂ ಮಾಡಿರುವೆ. ಲೇಖಕರು ತಮ್ಮ ತಮ್ಮ ಬರವಣಿಗೆಯ ಭಾಷೆಯಲ್ಲಿ ಅನುವಾದದ ಕೆಲಸವನ್ನು ಮಾಡಿದರೆ ಉತ್ತಮವಾಗಿರುತ್ತದೆ" ಎಂದು ಕವಿ ಮಾತನ್ನು ತಿಳಿಸಿದರು.

"ಹಕ್ಕಿಗಳಿಗೆ ನೀರಿಲ್ಲ, ಹಕ್ಕಿ ಸಾಯುತ್ತವೆ. ನಿಮ್ಮ ಕಿಟಕಿಯಲ್ಲಿ ಒಂದು ಲೋಟ ನೀರು ಇಡಿ. ಒಂದು ಲೋಟ ನೀರು ಇಡಿ. ಒಂದು ಹಕ್ಕಿ ಬದುಕಿ ಉಳಿಯುತ್ತದೆ ಎಂದು ಬರ್ದು 20 ಜನರಿಗೆ ಫಾರ್ವರ್ಡ್ ಮಾಡುತ್ತಾರೆ. ಅದನ್ನು ಅವರು ಕೆಲವು ಜನರಿಗೆ ಮೆಸೇಜ್ ಮಡುತ್ತಾರೆ. ಫಾರ್ವರ್ಡ್ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋಗುತ್ತದೆ. ಗುಬ್ಬಿಗೆ ತಟ್ಟೆಯಲ್ಲಿ ನೀರಿಡುವವರ ಸಂಖ್ಯೆ ಕಾಣುವುದೇ ಇಲ್ಲ. ಅದರ ಬದಲು ಆ ಕಾರ್ಯವನ್ನು ಕಾರ್ಯರೂಪಕ್ಕೆ ತಂದರೆ ಪ್ರಕೃತಿಗೆ ಒಂದು ಕೊಡುಗೆ ನೀಡಿದಾಗೆ ಆಗುತ್ತದೆ ಎಂದು ಸಮಾಜಕ್ಕೆ ಒಂದು ಸಂದೇಶವನ್ನು ನೀಡಿದರು.

"ಮಾನವೀಯ ಸತ್ಯವನ್ನು ಮನಗಾಣುವುದೇ ಲೇಖಕನ ಧರ್ಮ. ಲೇಖಕ ಯಾವ ಪಕ್ಷಪಾತಕ್ಕೆ ಸೇರಿದವನಲ್ಲ. ಅವನು ಮನುಜ ಪಕ್ಷಪಾತಿ. ಮನುಷ್ಯನಿಗಾಗಿ ಚಿಂತನೆ ಮಾಡುತ್ತಾನೆ" ಎಂದು ಲೇಖಕನ ಮನೋಧರ್ಮವನ್ನು ತಿಳಿಸಿದರು.

"ಇಂದು ಸಂಸ್ಕೃತಿ ತುಂಬಾ ಸುಲಭವಾದ ಶಬ್ದವಾಗಿದೆ. ವರ್ತಮಾನ ಲೋಕದ ಭಾವ ಪ್ರಪಂಚವೇ ಸಂಸ್ಕೃತಿ" ಎಂದು ಬೇಂದ್ರೆಯವರು ಒಂದು ಕಡೆ ತಿಳಿಸಿರುವರು. ಇವತ್ತಿನ ವ್ಯಕ್ತ – ಅವ್ಯಕ್ತವನ್ನು , ಇವತ್ತಿನ ಶ್ರಾವ್ಯ–ಅಶ್ರಾವ್ಯವನ್ನು, ಇವತ್ತಿನ ದೃಶ್ಯ–ಅದೃಶ್ಯವನ್ನು ಉದ್ದೀಪಸಬೇಕು" ಎಂದು ಸಂಸ್ಕೃತಿಯ ಮಹತ್ವದ ಬಗ್ಗೆ ತಿಳಿಸಿರುವರು.

ಈ ರೀತಿ ಜಯಂತ್ ಕಾಯ್ಕಿಣಿಯವರು ತಮ್ಮ ಸಾಹಿತ್ಯ ಹುಟ್ಟಿ ಬಂದ ರೀತಿ, ಪ್ರೇರಣೆ, ಅನುಭವ, ಅನಿಸಿಕೆಗಳನ್ನು ಹಂಚಿಕೊಂಡರು. "ಸಾಹಿತ್ಯವೆಂದರೆ ಕೇವಲ ಬರವಣಿಗೆ ಮಾತ್ರವಲ್ಲ, ಓದು ಮುಖ್ಯ, ಅಂತ ಮಹತ್ವದ ಒಂದು ಮಾತನ್ನು ಹೇಳುತ್ತಾ ಅಲ್ಲಿ ನೆರೆದಿದ್ದ ಸಾಹಿತ್ಯ ಅಭಿಮಾನಿಗಳಿಗೆ, ಸಾಹಿತ್ಯ ವಿದ್ಯಾರ್ಥಿಗಳಿಗೆ ಹೆಚ್ಚು ಓದುವಂತೆ ಪ್ರೇರೆಪಿಸಿದರು. ಈ ಕಾರ್ಯಕ್ರಮದ ಸ್ವಾಗತ ಪ್ರಸ್ತಾಪನೆಯನ್ನು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಮುಖ್ಯಸ್ಥ ಡಾ। ಜಿ. ಎನ್. ಉಪಾಧ್ಯ ಮಾಡಿದರು. ಡಾ। ಪೂರ್ಣಿಮಾ ಶೆಟ್ಟಿ ಮತ್ತು ಕನ್ನಡ ವಿಭಾಗ ಸಂಶೋಧನಾ ಸಹಾಯಕಿ ರಮಾ ಉಡುಪರವರು ಕಾರ್ಯಕ್ರಮವನ್ನು ನಿರೂಪಣ ಮಾಡಿದರು.

■

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎಸ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

*ಸಂಪಾದಕೀಯ*

# ನೇಸರು
## ತಿಂಗಳೋಲೆ

**ಸಂಪುಟ 34** | **ಫೆಬ್ರವರಿ 2016** | **ಸಂಚಿಕೆ 2**

ಬದುಕು ಅಂದರೆ ಒಂದು ರೀತಿಯಲ್ಲಿ ಅಸ್ತಿತ್ವದ ಹುಡುಕಾಟ ಎನ್ನಬಹುದು. ನಮ್ಮ ದಿನನಿತ್ಯದ ಬದುಕಿನ ಹೋರಾಟ ಇದರಿಂದ ಪ್ರೇರಣೆ ಪಡೆಯುತ್ತದೆ. ಹುಟ್ಟಿದ ಮನುಷ್ಯ ಒಂದಲ್ಲ ಒಂದು ದಿನವಾದರೂ ಸಾಯಲೇಬೇಕು ಎನ್ನುವ ವಾಸ್ತವಿಕ ಸತ್ಯ ನಮ್ಮ ಕಣ್ಣೆದುರಿಗಿದ್ದರೂ, ಅದರಿಂದ ಹಿಮ್ಮೆಟ್ಟದೆ ನಮ್ಮ ಬದುಕಿನ ನಿಜವಾದ ಅಸ್ತಿತ್ವದ ಹುಡುಕಾಟದಲ್ಲಿ ನಮ್ಮನ್ನು ತೊಡಗಿಸಿಕೊಳ್ಳುತ್ತೇವೆ. ಎರಡು ದಿನದ ಬದುಕಾದರೂ ಈ ಬದುಕನ್ನು ಸಾರ್ಥಕಪಡಿಸಿಕೊಳ್ಳುವ ತುಡಿತ ಎಲ್ಲರಲ್ಲೂ ಎದ್ದು ಕಾಣುತ್ತದೆ.

ಬದುಕು ನಮ್ಮನ್ನು ರೂಪಿಸಿತು ಅನ್ನೋದಕ್ಕಿಂತ ಈ ಬದುಕನ್ನು ರೂಪಿಸಿದವರು ನಾವು ಎನ್ನುವ ಆತ್ಮವಿಶ್ವಾಸದ, ಭರವಸೆಯ ಕಿರಣದ ಅವಶ್ಯಕತೆಯಿದೆ. ನಮ್ಮ ಜೀವನ ಒಂದು ಕನ್ನಡಿ ಇದ್ದಂತೆ, ನಾವೇನು ಆಗಿದ್ದೇವೆ ಎಂಬುದನ್ನು ನಮ್ಮ ಜೀವನ ನಮಗೆ ಬಿಂಬಿಸುತ್ತದೆ. ಉತ್ತಮ ಕೆಲಸ ಮಾಡೋದರ ಮೂಲಕ ಉತ್ತಮ ಪ್ರತಿಬಿಂಬ ಕಾಣಬೇಕಷ್ಟೇ. ತನ್ನ ವ್ಯಕ್ತಿತ್ವವನ್ನು ಸುಧಾರಿಸಿಕೊಳ್ಳ ಬಯಸುವ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ನಿತ್ಯವೂ ಒರೆಗೆ ಹಚ್ಚುತ್ತಿರಲೇಬೇಕು. ಆಗ ಮಾತ್ರ ವ್ಯಕ್ತಿತ್ವದ ಘನತೆ, ಔನತ್ಯ ಹೆಚ್ಚುತ್ತದೆ. ಹುಟ್ಟು ನಮಗೆ ಗೊತ್ತಿರುವುದಿಲ್ಲ. ನಾವು ಏನಾಗುತ್ತೀವಿ ಅನ್ನುವುದೂ ನಮಗೆ ಗೊತ್ತಿರುವುದಿಲ್ಲ. ಆದರೆ ಅದೆಲ್ಲೋ ಆಸೆಯ ಬೀಜವೊಂದು ಸೇರಿಕೊಂಡು ಬಿಟ್ಟಿದ್ದರೆ ಅದು ಚಿಗುರೊಡೆಯುವುದನ್ನೇ ಕಾಯುತ್ತಿರುತ್ತದೆ. ಚಿಗುರೊಡೆದಾಗ ಅದು ಯಾವ ರೀತಿ ಬೆಳೆಯುತ್ತದೆ ಅನ್ನುವುದು ಸ್ವತಃ ಆ ಬೀಜಕ್ಕೆ ಗೊತ್ತಿರುವುದಿಲ್ಲ. ಆದರೂ ಆ ಬೀಜ ಮುಂದೊಂದು ದಿನ ನೂರಾರು ಜನರಿಗೆ ಆಶ್ರಯ ಕೊಡುವಂತಹ ಮರವಾಗಿ ಬೆಳೆಯುತ್ತದೆ.

ಕೊಲಂಬಸ್ ಮನೆಯಿಂದ ಹೊರಟಾಗ ಮುಂದೊಂದು ದಿನ ತಾನು ಅಮೇರಿಕವನ್ನು ಕಂಡುಹಿಡಿಯುತ್ತೇನೆ ಅಂದುಕೊಂಡಿದ್ದನಾ? ಜೀವನದಲ್ಲಿ ಏನೋ ಆಗಬೇಕೆಂದು ಕನಸುಗಳನ್ನು ಕಟ್ಟಿಕೊಂಡಿರುತ್ತೇವೆ. ಪರಿಸ್ಥಿತಿಯ ಒತ್ತಡದಿಂದ ಇನ್ನೇನೋ ಆಗ್ತೀವಿ. ಹೀಗೆ ತಾವು ಅಂದುಕೊಂಡ ಹಾಗೆ ನಡೆಯದೇ ಇನ್ನೇನೋ ಆಗಿ ಸಾಧಿಸಿದ ಅಸಂಖ್ಯ ಜನರ ಉದಾಹರಣೆಗಳು ನಮ್ಮ ಮುಂದಿವೆ. ಮೊದಲು ವಿಫಲರಾಗಿ, ಲೋಕ ನಿಂದಿತರಾಗಿ, ಕೇಳಬಾರದ ಬೈಗುಳವನ್ನು ಕೇಳಿಸಿಕೊಂಡು ಕೊನೆಗೆ ಯಾರೂ ಮಾಡದ ಅಸಾಮಾನ್ಯ ಸಾಧನೆಯನ್ನು ಮಾಡಿದವರು ನಮ್ಮೊಂದಿಗಿದ್ದಾರೆ. ಹೀಗಾಗಿ ನೀವು ಅಂದುಕೊಂಡಿದ್ದನ್ನು ಸಾಧಿಸಲು ಆಗದಿದ್ದರೆ, ಜೀವನದ ಆರಂಭದಲ್ಲಿ ನಿಮ್ಮ ಅಭಿಲಾಷೆಗಳು ಈಡೇರದಿದ್ದರೆ ಅದಕ್ಕಾಗಿ ಎದೆಗುಂದಬೇಕಿಲ್ಲ. ಜೀವನದಲ್ಲಿ ಜುಗುಪ್ಸೆ ಹೊಂದಿ ಖಿನ್ನರಾಗಬೇಕಿಲ್ಲ. ಅದು ನಿಮ್ಮ ಜೀವನದಲ್ಲಿ ಹೊಸ ಮಾರ್ಗ ಶೋಧನೆಗೆ ಕಾರಣವಾಗಬಹುದು. ನಿಮ್ಮನ್ನು ಹೊಸ ಸಾಹಸಕ್ಕೆ ಅಣಿಗೊಳಿಸಬಹುದು. ಬದುಕು ನಾವು ಅಂದುಕೊಂಡಷ್ಟು ಕಷ್ಟವಾಗಿಲ್ಲ. ಆದರೆ ನಾವು ಅಂದುಕೊಂಡಿದ್ದಕ್ಕಿಂತ ಸರಳವಾಗಿದೆ. ಒಮ್ಮೆ ಅದನ್ನು ಮನಸಾರೆ ಅನುಭವಿಸಿ ನೋಡಿ. ಆಗ ಅದರ ರುಚಿ ನಿಮಗೆ ತಿಳಿಯದಿದ್ದರೆ ಹೇಳಿ.

ಅಸ್ತಿತ್ವದ ಹುಡುಕಾಟ ಇಂದು ನಿನ್ನೆಯ ಸಮಸ್ಯೆಯಲ್ಲ. ಅನಾದಿಕಾಲದಿಂದಲೂ ಈ ಸಮಸ್ಯೆಯನ್ನು ಎದುರಿಸುತ್ತಾ ಬಂದಿರುವುದಕ್ಕೆ ನಮ್ಮ ಇತಿಹಾಸ ಸಾಕ್ಷಿಯಾಗಿದೆ. ಸಾಹಿತ್ಯ ನಮ್ಮ ಜೀವನದ ಇನ್ನೊಂದು ಸಂಗಾತಿಯಿದ್ದಂತೆ. ಜೀವನದಲ್ಲಿ ಸೋತು ಬಿದ್ದವನನ್ನು ಸಾಹಿತ್ಯ ಸಂತೈಸಿ ಮರಳಿ ಯತ್ನವ ಮಾಡುವಂತೆ ಪ್ರೇರೇಪಿಸುತ್ತದೆ. ಸಾಹಿತ್ಯ ನಮ್ಮಲ್ಲಿರುವ ನಮ್ಮನ್ನು ಹುಡುಕುವುದು ಹೇಗೆ? ಅನ್ನೋದನ್ನು ಕಲಿಸಿಕೊಡುತ್ತದೆ. ಸಾಹಿತ್ಯ ನಮ್ಮಗೆ ಬದುಕುವ ಕಲೆಯನ್ನು ತಿಳಿಸಿಕೊಡುವ ಯತ್ನ ಮಾಡುತ್ತದೆ. ಬದುಕುವ ಸರಳ ಮಾರ್ಗಗಳ ಮೇಲೆ ಅದು ಬೆಳಕು ಚೆಲ್ಲುತ್ತದೆ. ಹಾಗಾಗಿ ಸಾಹಿತ್ಯ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ.

ಈಗ ಕಾಲ ಬದಲಾಗಿದೆ. ಹಿಂದೊಂದು ಕಾಲವಿತ್ತು. ಪುರುಷ ಸಮಾಜದಲ್ಲಿ ಸ್ತ್ರೀಯ ಅಸ್ತಿತ್ವ ಏನು ಅನ್ನೋದೇ ತಿಳಿದಿರಲಿಲ್ಲ. ಕೇವಲ ಅಡುಗೆ ಮನೆಗೆಷ್ಟನೇ ಸೀಮಿತವಾಗಿದ್ದ ಅವರ ಬದುಕು ಇಂದು ಅದನ್ನು ಮೀರಿ ಬೆಳೆದು ತಮ್ಮ ವ್ಯಕ್ತಿತ್ವದ ಸೀಮೆಯನ್ನು ವಿಸ್ತರಿಸಿಕೊಂಡಿದ್ದಾರೆ. ತನ್ನ ಅಸ್ತಿತ್ವವನ್ನು ಹುಡುಕಿಕೊಂಡಿದ್ದಾಳೆ. ಪುರುಷ ಸಮಾಜದಲ್ಲಿ ಸ್ತ್ರೀ ತನ್ನ ಅಸ್ತಿತ್ವದ ಹುಡುಕಾಟದಲ್ಲಿ ಸಫಲಳಾದರೆ ಅವಳ ಬದುಕು ಸಾರ್ಥಕವಾದಂತೆ.

***- ಡಾ. ಜ್ಯೋತಿ ಸತೀಶ್***

# 'ಮೊದಲ ಬೆಳೆ' ಕವನ ಸಂಕಲನದ ಒಳನೋಟ

'ಮೊದಲ ಬೆಳೆ' ಇದು ಶಾಂತಾ ಶಾಸ್ತ್ರಿ ಅವರ ಚೊಚ್ಚಲ ಕವನ ಸಂಕಲನ. ಸಾಹಿತ್ಯಾಸಕ್ತರಾಗಿರುವ ಶಾಂತಾ ಶಾಸ್ತ್ರಿ ಅವರು ಸುಸಂಸ್ಕೃತ ಮನೆತನದವರು. ಕುಟುಂಬದ ಗೃಹಿಣಿಯಾಗಿದ್ದುಕೊಂಡು ಕವನಗಳನ್ನು ರಚಿಸುತ್ತಿರುವುದು ಲೇಖಕಿಯ ಕಾವ್ಯಾಸಕ್ತವೇ ಕಾರಣ. ಪ್ರಸ್ತುತ ಕವನ ಸಂಕಲನವನ್ನು 'ಮನಸ್ವೀ ಪ್ರಕಾಶನ' ಬೆಳಕಿಗೆ ತಂದಿದೆ. ಇದರಲ್ಲಿ ಐವತ್ತೊಂಬತ್ತು ಕವನಗಳಿವೆ. ದೇವರ ಭಕ್ತಿ, ಪ್ರೀತಿ, ವಾತ್ಸಲ್ಯ, ಪ್ರಕೃತಿ ಪ್ರೇಮ, ಸಾಮಾಜಿಕ ಕುಂದುಕೊರತೆಗಳ ಕುರಿತು ಬರೆದ ಕವಿತೆಗಳು ಬಹಳ ಸುಂದರವಾಗಿ ಮೂಡಿಬಂದಿದೆ. ಕುರು 'ಪಾಂಡವಾಯಣ', 'ರಾಮಾ ನೀನು ತಪ್ಪಿದೆ' ಈ ಎರಡು ಕವಿತೆಗಳು ಮರಾಠಿಯಿಂದ ಕನ್ನಡಕ್ಕೆ ತುಂಬ ಸೊಗಸಾಗಿ ಅನುವಾದಿಸಲಾಗಿದೆ.

ಇಲ್ಲಿಯ ಹೆಚ್ಚಿನ ಕವಿತೆಗಳು ಭಕ್ತಿ ಪ್ರಧಾನವಾಗಿವೆ. ದೇವರ ಮೇಲೆ ಅಪಾರ ನಂಬಿಕೆಯುಳ್ಳವರು ಎಂಬುದು ಕವಿಯತ್ರಿಯ ಮೊದಲನೆಯ ಕವಿತೆ 'ಭಕ್ತಿ ಬೆಳೆ'ಯಿಂದ ಗಮನಕ್ಕೆ ಬರುವುದು.

"ಜೀವನದ ಹೊಲದಾಗ
ಭಕ್ತಿ ಬೀಜವ ಬಿತ್ತಿ
ಮುಕ್ತಿ ಫಲವನು ಬೆಳೆಯುವ
ಒಕ್ಕಲಿಗ ಬಾರೋ ನನ್ನೊಡೆಯ !
ಜೀವನದ ಹೊಲದಾಗ
ಬೆಳೆ ಭೇಶಾಗ ಬಂದೈತೆ
ಅದ ಕೀಳಾಕ ಬಾರೋ ನನ್ನೊಡೆಯ!" (ಪುಟ-1)

ಇಲ್ಲಿ ಲೇಖಕಿ ಹೇಳುವ ಉದ್ದೇಶವೇನೆಂದರೆ ಮನುಷ್ಯನಿಗೆ ಜೀವನದಲ್ಲಿ ಕಷ್ಟ ಸುಖಗಳ ದರ್ಶನವಾಗುವುದು ಸಹಜ. ಪ್ರತಿಯೊಬ್ಬನಿಗೂ ಬಾಳಿನಲ್ಲಿ ಸುಖ ಸಂತೋಷ ಲಭಿಸಬೇಕಾದರೆ ಕಷ್ಟಪಟ್ಟು ದುಡಿಯಬೇಕು. ಕಾಯಕ ಮಾಡುತ್ತಲೇ ಭಗವಂತನ ನಾಮಸ್ಮರಣೆ ಮಾಡುತ್ತಿರಬೇಕು. ದೇವರಲ್ಲಿ ಅಚಲ ಶ್ರದ್ಧೆ ಹೊಂದಿರಬೇಕು. ಅಂದಾಗ ಮನಸ್ಸಿಗೆ ಶಾಂತಿ ದೊರಕುವುದು. ಒಕ್ಕಲಿಗ ಬೆಳೆದ ಪೈರನ್ನು ರಾಶಿ ಮಾಡುವಾಗ ಕಸ, ಹೊಟ್ಟು, ಗಾಳಿಗೆ ತೂರುತ್ತಾರೆ. ಗಟ್ಟಿ ಕಾಳುಗಳು ಪರಿಶ್ರಮದ ಸಂಕೇತವಾಗಿದೆ.

"ಹೊಲದ ಪೈರನ್ನು ತಂದು
ಕಣಜ ತುಂಬಿಸಲಾಕ
ಜೊಳ್ಳು ಜಾಪುಗಳೈತೆ
ಅದ ತೂರ್ಸಾಕ ಬಾರೋ ನನ್ನೊಡೆಯ !
ಹೊಟ್ಟು ಹುಲ್ಲನು ಬಿಟ್ಟಿ
ಗಟ್ಟಿ ಕಾಳಿನ ಮೂಟಿ
ಒತ್ತೊತ್ತಿ ನೀ ಕಟ್ಟಿ
ಮೋಕ್ಷ ಪಟ್ಟಣಕ ಒಯ್ಯಬಾರೋ ನನ್ನೊಡೆಯ!" (ಪುಟ-1)

ಮಾನವನ ಬದುಕನ್ನು ವಿಶಾಲವಾದ ಭೂಮಿತಾಯಿಗೆ ಹೋಲಿಸಲಾಗಿದೆ. ಜೀವನದಲ್ಲಿ ಬರುವ ತಂದರೆಗಳು ಹೊಟ್ಟು, ಹುಲ್ಲಿನಂತೆ. ಅವು ಆಗಾಗ ಬೆಳೆದು ನಾಶವಾಗುವಂತಹದ್ದು. ಹೊಲದಲ್ಲಿ ಹುಲ್ಲು ಸರ್ವೇಸಾಮಾನ್ಯವಾಗಿ ಬೆಳೆಯುತ್ತದೆ. ಅದನ್ನು ರೈತ ಬೆಳೆ ಬೆಳೆಯುವಾಗ ಕಿತ್ತು ಬಿಸಾಕುತ್ತಾನೆ. ಬೆಳೆದ ಬೆಳೆಯ ರಾಶಿ ಮಾಡುವಾಗ ಕಾಳುಗಳಲ್ಲಿಯ ಹೊಟ್ಟನ್ನು ಗಾಳಿಗೆ ತೂರಿಬಿಡುತ್ತಾನೆ. ಗಟ್ಟಿ ಕಾಳುಗಳನ್ನು ಸಂಗ್ರಹಿಸಿಕೊಳ್ಳುತ್ತಾನೆ. ಇಲ್ಲಿ ಕವಯಿತ್ರಿ ಜೀವನ ಎಂಬ ಹೊಲದಲ್ಲಿ ಕಷ್ಟ ದುಃಖಗಳು ಹೊಟ್ಟು ಹುಲ್ಲು ಇದ್ದಂತೆ. ಅವುಗಳನ್ನು ನಾಶಮಾಡಿ ಮೋಕ್ಷದ ಮಾರ್ಗದೊಂದಿಗೆ ಬಾಳನ್ನು ಪಾವನಗೊಳಿಸಬೇಕು ಎಂದಿದ್ದಾರೆ.

ಹೆಣ್ಣಿನ ಮನಸ್ಸಿನವರಾದ ಶಾಂತಾ ಶಾಸ್ತ್ರಿ ಅವರು 'ಸ್ತ್ರೀಶಕ್ತಿ', 'ಭ್ರೂಣ ಹತ್ಯೆ', 'ನೀನು ತಾಯಾಗುತಲಿರುವೆ' ಇತ್ಯಾದಿ ಕವಿತೆಗಳಲ್ಲಿ ಸ್ತ್ರೀಪರ ಚಿಂತನೆ ಮಾಡಿದಾರೆ. ಈಗಿನ ಸಮಾಜದಲ್ಲಿ ಮಹಿಳೆಯರ ಹಕ್ಕುಗಳಿಗಾಗಿ ಹೋರಾಟ ನಡೆಸಲು ಅನೇಕ ಮಹಿಳಾ ಸಂಘಟನೆಗಳಿವೆ. ಇಂದು ವೇಗವಾಗಿ ಬೆಳೆಯುತ್ತಿರುವ ನಗರ, ಮಹಾ ನಗರಗಳಲ್ಲಿ ಮಹಿಳೆಯರು ತಮ್ಮ ಹಕ್ಕುಗಳನ್ನು ಪಡೆದುಕೊಂಡಿದ್ದಾರೆ. 'ಹೆಣ್ಣು ಅಬಲೆ ಅಲ್ಲ ಸಬಲೆ' ಎಂಬ ಭಾಷಣಗಳು ಕೇಳಿಬರುತ್ತಿವೆ. ಸರಕಾರಿ ನೌಕರಿಯಲ್ಲಿ, ರಾಜಕೀಯ ಚುನಾವಣೆಯಲ್ಲಿ ಇತರ ಎಲ್ಲಾ ಖಾತೆಗಳಲ್ಲಿ ಹೆಣ್ಣುಗಳಿಗೆ ಗಂಡಿನಷ್ಟೇ ಸಮಾನ ಅವಕಾಶಗಳಿವೆ ಎಂಬ ವರದಿಗಳು ಪ್ರಕಟವಾಗುತ್ತಿವೆ. ಆದರೆ, ಹೆಣ್ಣಿನ ಮೇಲೆ ನಡೆಯುವ ಅನ್ಯಾಯ, ಅತ್ಯಾಚಾರ, ದಬ್ಬಾಳಿಕೆ, ಶೋಷಣೆಯನ್ನು ಗಮನಿಸಿದರೆ ಹೆಣ್ಣು ಸುರಕ್ಷಿತವಾಗಿದ್ದಾಳೆಯೇ? ಎಂಬ ಪ್ರಶ್ನೆ ನಮ್ಮೆಲ್ಲರ ಮುಂದೆ ನಿಲ್ಲುತ್ತದೆ. ಇದಕ್ಕೆ ಲೇಖಕಿ ಸಮಾಜದ ಎಲ್ಲಾ ಮಹಿಳೆಯರಿಗೆ ತಮ್ಮ ಕವಿತೆಯ ಸಾಲುಗಳ ಮೂಲಕ ಮುಂದಿನಂತೆ ಎಚ್ಚರಿಕೆಯನ್ನು ಕೊಡುತ್ತಾರೆ.

ಸ್ವಾತಂತ್ರ್ಯವನ್ನು ಬಯಸಿ
ಸ್ವ ತಂತ್ರವನು ಮರೆತು
ಅತಂತ್ರಳಾಗಿ ನೀ
ಅಲೆಯದಿರು ಹೆಣ್ಣೇ
ಎಂದಿಗಿದ್ದರೂ ನೀನು
ಈ ಬಾಳಿಗೆ ಕಣ್ಣೇ !
ಸ್ತ್ರೀ ಶಕ್ತಿ ಹೊಗಳುತ್ತ
ಶಿಸ್ತಿನಿಂದಲೇ ನಿನ್ನ
ಅಸ್ತರವ ಮಾಡಿಹರು
ಅಸ್ಥಿರದ ಜೀವನಕೆ
ಬೆಸ್ತು ಬೀಳದಿರು
ಅಸ್ತು ಎನ್ನುತಿರು
ನಿನ್ನ ಹೆಣ್ತನಕ್ಕೆ
ಭವ್ಯ ಭವದ ನಿರ್ಮಾಣಕೆ!" ಎಂದು ಇಲ್ಲಿ ಕವಯಿತ್ರಿ ಪ್ರತಿ ಎಲ್ಲಾ ಹೆಣ್ಣುಮಕ್ಕಳು ತಮಗೆ ಸ್ವಾತಂತ್ರ್ಯವಿದೆಯೆಂದು ಅಹಂ ಭಾವನೆ ಹೊಂದಿರಬಾರದು. ತಾನು ಹೆಣ್ಣು ಎಂಬ ಪ್ರಜ್ಞೆ ಎಲ್ಲ ಸ್ತ್ರೀಯರಿಗೂ ಗೊತ್ತಿರಬೇಕು. ಹೆಣ್ಣು ಪ್ರಕೃತಿ ಇದ್ದಂತೆ. ಹೆಣ್ಣಿಗೆ ಪ್ರಕೃತಿಯಂತೆ ರೂಪ, ಲಾವಣ್ಣ, ಸೌಂದರ್ಯ ಎಲ್ಲವೂ ಇರುವುದು. ಜೀವ ಸೃಷ್ಟಿಸುವ ಶಕ್ತಿ ಕೇವಲ ಹೆಣ್ಣಿಗೆ ಮಾತ್ರವಿದೆ. ಅದಕ್ಕಾಗಿಯೇ "ಓ.. ಸೃಷ್ಟಿಕರ್ತನೇ ನಿನಗೆ ನಮನ. ಅರಿವಿನೆಣ್ಣೆಯ ಸುರಿದು ಬೆಗು ಹೊಸ ಜೀವನ" ಎಂದು ಲೇಖಕಿ ಸ್ತ್ರೀ ಶಕ್ತಿಯ ಗುಣಗಾನ ಮಾಡಿದ್ದಾರೆ.

ಇಡಗುಂಜಿ ಗಣಪನಲ್ಲಿ ಭಕ್ತಿ, ಕಾಂಚಿಕಾಂಬೆಗೆ ಆರತಿ, ಉಂಚಗಿ ವಿಷ್ಣುಮೂರತಿ, ಮಾರುತಿ ಸ್ತುತಿ ಈ ಮೊದಲಾದ ಕವಿತೆಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಬರುವ ಗ್ರಾಮ ದೇವತೆಗಳ ಕುರಿತು ಬರೆದ ಕವನಗಳಾಗಿವೆ. ಅವು ಅತ್ಯಂತ ಸರಳವಾಗಿದ್ದು, ನಿತ್ಯ ಪಠಿಸುವಂತಿವೆ. ಉದಾಹರಣೆಗಾಗಿ 'ಕಾಂಚಿಕಾಂಬೆಗೆ ಆರತಿ' ಈ ಕವಿತೆಯ ಕೆಲವು ಸಾಲುಗಳನ್ನು ನೋಡಬಹುದು.

"ಆರಲೇ ಮಂಗಳಾರತಿ
ಎತ್ತಿರೆ, ಆರತೀ ಮುತ್ತಿನಾರತೀ
ಜಯ ಅಂಬೆಗೆ ಜಗದಂಬೆಗೆ
ಶ್ರೀ ಕಾಂಚಿಕಾಂಬಾ ದೇವಿಗೆ !
ಮೆಟ್ಟಲನೇರಿ ಬೆಟ್ಟಕೆ ಬನ್ನಿ
ಕಾಂಚಿಕಾ ವನವ ಸುತ್ತುತ ಬನ್ನಿ
ಅಂಬಿಕೆಯ ದರುಶನಕೆ ಬನ್ನಿ
ಅಂದದಾರತಿ ಬೆಳಗಲು ಬನ್ನಿ

ಜಯ ದುರ್ಗೆಗೆ ದುರ್ಗಾಂಬೆಗೆ
ಭವಾನಿಗೆ ಮೂಕಾಂಬಿಕೆಗೆ
ಶ್ರೀ ಕಾಂಚಿಕಾಂಬಾ ದೇವಿಗೆ !" (ಪುಟ-22)

ನಾಡು ನುಡಿ, ದೇಶಪ್ರೇಮದಂತಹ ಕವಿತೆಗಳನ್ನು ಇಲ್ಲಿ ನಾವು ಕಾಣಬಹುದು. ಕನ್ನಡ ನಾಡು ಗಂಧದ ಬೀಡು, ಸಾಹಿತಿಗಳ ನಾಡು ಎಂದಿದ್ದಾರೆ ಕವಯಿತ್ರಿ. ಕನ್ನಡಿಗರು ಸುಸಂಸ್ಕೃತರು. ಭಾಷಾಭಿಮಾನಿಗಳು ಎಂದು ಹೇಳುವ ಲೇಖಕಿ 'ಸುವರ್ಣ ಕರ್ನಾಟಕ' ಎಂಬ ಕವನದಲ್ಲಿ ಹೀಗೆ ಬರೆಯುತ್ತಾರೆ...

"ಕನ್ನಡ ನುಡಿ ಇಂದು
ಕನ್ನಡ ಶ್ರೀಗಂಧದ ಕಂಪು
ಕನ್ನಡ ನೆಲ ಸೊಂಪು
ಸವಿದು ಸಂಭ್ರಮಿಸುವ ಬನ್ನಿ
ಸುವರ್ಣ ಕರ್ನಾಟಕದಲ್ಲಿ !"

ಪಂಪ ರನ್ನ ಕುಮಾರವ್ಯಾಸ ಮಹಾಕಾವ್ಯಗಳಲಿ
ಕುವೆಂಪು - ಬೇಂದ್ರೆ - ಕಣವಿ ಕವನ ಸಾಗರದಲಿ
ಅಮಿತ ಸಾಹಿತಿಗಳ ಸುಗಮ ಸಂಗೀತದಲಿ
ತೇಲಿ ತೊನೆಯುವ ಬನ್ನಿ
ಸುವರ್ಣ ಕರ್ನಾಟಕದಲ್ಲಿ
ಕರಾವಳಿಯ ಕಡಲಲ್ಲಿ ಈಜುತ್ತ ಬನ್ನಿ
ಮಲೆನಾಡ ಮಡಿಲಿನಲ್ಲಿ ಮೈಮರೆಯುವ ಬನ್ನಿ
ಬಯಲು ಸೀಮೆಯ ಬಯಲ ಸುತ್ತುತ್ತ ಬನ್ನಿ
ಸಂಭ್ರಮಿಸಲು ಬನ್ನಿ
ಸುವರ್ಣ ಕರ್ನಾಟದಲ್ಲಿ (ಪುಟ - 52, 53)

ಜಗತ್ತಿಗೆ ಬೆಳಕು ನೀಡುವ ಸೂರ್ಯನ ಸೂರ್ಯೋದಯದ ವರ್ಣನೆಯನ್ನು 'ಬೆಳಗು' ಕವಿತೆಯಲ್ಲಿ ಬಹಳ ಚೆನ್ನಾಗಿ ಅಭಿವ್ಯಕ್ತಿಸಿದ್ದಾರೆ. ಅದು ಮುಂದಿನಂತಿದೆ...

"ಬೆಳ್ಳಾನೆ ಬೆಳ್ಳಕ್ಕಿ ಬೆಣಚರಗೆ ಬಾಗಿಲಲಿ
ಬೆಳಗಾಯಿತೆಂದು ಕೂಗಿರಲು
ಬೆಟ್ಟದ ತುದಿಯಿಂದ ಬೆಣಚಿನ ಕಿರಣಗಳ
ಬೆಣಚರಗೆಯೊಳಗೆ ತೂರುವವನು
ಭೀಮರಾಯನಪ್ಪ ಸೂರ್ಯಪ್ಪ ||"

ಸಕಲ ಜೀವರಾಶಿಗಳಿಗೆ ಸೂರ್ಯನು ಬೆಳಕು, ಶಕ್ತಿ ನೀಡುತ್ತಾನೆ. ಅವನನ್ನು ಸಕಲ ಜೀವರಾಶಿಗಳಿಗೆ ಆರಾಧನೆ ಮಾಡಿದಂತೆ ಆಗುವುದು. ಹೊಲದಲ್ಲಿ ದುಡಿಯುವ ರೈತರು ಸೂರ್ಯಪ್ಪನನ್ನು ದೇವರು ಎಂದು ಪೂಜಿಸುತ್ತಾರೆ ಎಂದು ಲೇಖಕಿ ತಿಳಿಸುತ್ತಾರೆ.

ಪ್ರಸ್ತುತ ಕವನದಲ್ಲಿ ಉತ್ತರ ಕನ್ನಡ ಜಿಲ್ಲೆಯ ಉಪಭಾಷೆಯಾದ ಹವ್ಯಕ ಕನ್ನಡ ಛಾಪು ಎದ್ದು ಕಾಣುವುದು. ಸಾಂಸ್ಕೃತಿಕ ಕಾರ್ಯಕ್ರಮ, ಸಮಾವೇಶ, ಉತ್ಸವಗಳಿಗಾಗಿ ಬರೆದ ಕೆಲವು ಕವನಗಳನ್ನು ಇಲ್ಲಿ ಸೇರಿಸಲಾಗಿದೆ. ಇಲ್ಲಿಯ ಕವಿತೆಗಳು ಪ್ರಾಸ, ಛಂದಸ್ಸುಗಳಿಂದ ಚೆಂದವಾಗಿವೆ. ಮಾನವ್ಯ ಕವಿ ಬಿ.ಎ. ಸನದಿ ಅವರ ಮುನ್ನುಡಿ ಈ ಕವನ ಸಂಕಲನಕ್ಕೆ ಶೋಭೆಯನ್ನು ತಂದಿದೆ. ಇನ್ನೂ ಹೆಚ್ಚು ಒಳ್ಳೆಯ ಕವಿತೆಗಳನ್ನು ರಚಿಸುವ ಶಕ್ತಿ ಲೇಖಕಿಯಲ್ಲಿದೆ. ಅವರು ಇನ್ನಷ್ಟು ಒಳ್ಳೆಯ ಕವನಗಳನ್ನು ಬರೆಯುವಂತಾಗಲಿ. ಮೊದಲ ಬೆಳೆ ಈ ಕವನ ಸಂಕಲನ ರಚಿಸಿದ ಶಾಂತಾಶಾಸ್ತ್ರಿ ಅವರಿಗೆ ಹಾರ್ದಿಕ ಅಭಿನಂದನೆಗಳು.

***- ದುರ್ಗಪ್ಪ ಯ. ಕೋಟಿಯವರ್, ಪನ್ವೇಲ್***

## MATRIMONIAL

Well Settled Madhav Brahmin Girl, BE/M.S., Kannada Speaking

Height : 6ft 1”.
Age : 27 years.
Gotra : Kaushik, Nakshatra – Hasta.
Kanya Rasi, Working in U.S.

*Interested may contact at*

Phone number : +91 96193 57670 or 022 – 24057629
Email : ramarao010@gmail.com


“Suitable Alliance invited for Kannada Brahmin Girl, Software Professional currently working with leading MNC in Mumbai.

Height - 5ft 1"
Age - 23 yrs
Education - Masters in Computer Application
Gothra - Angirasa
Rashi - Meen

Our preference will be for professionally well qualified with Age between 25 - 27 yrs having moderate outlook.

Interested may contact @9322890721 or 9820291782 /E-mail: lakshmibhat2223@gmail.com / asbhat2210@gmail.com.

## ಭಾವಪೂರ್ಣ ಶ್ರದ್ಧಾಂಜಲಿ



ವಿಧಾನ ಸೌಧದ ನಿರ್ಮಾಣ ಸಂದರ್ಭದಲ್ಲಿ ಅದರ ಮುಖ್ಯ ಒಳಾಂಗಣ ವಿನ್ಯಾಸಕರಾಗಿದ್ದ ಶಿಲ್ಪಿ ಪ್ರೊ. ಸಿ. ಪರಮೇಶ್ವರಾಚಾರ್ಯ ಅವರು ಇತ್ತೀಚೆಗೆ ನಿಧನರಾಗಿದ್ದಾರೆ. ಮೈಸೂರು ಮೂಲದವರಾದ ಪರಮೇಶ್ವರಾಚಾರ್ಯ ಅವರು 1994ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಲಲಿತಕಲಾ ಪ್ರಶಸ್ತಿ, ರಾಮ್ಸನ್ ಕಲಾ ಪ್ರತಿಷ್ಠಾನ ನೀಡುವ ಶಿಲ್ಪಶ್ರೀ ಪ್ರಶಸ್ತಿಗೆ ಅವರು ಭಾಜನರಾಗಿದ್ದಾರೆ.

ಕರ್ನಾಟಕ ಶಿಲ್ಪಕಲಾ ಅಕಾಡೆ'ಿಯ ಮಾಜಿ ಅಧ್ಯಕ್ಷರೂ ಆಗಿರುವ ಪ್ರೊ. ಸಿ. ಪರಮೇಶ್ವರಾಚಾರ್ಯ ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಹಾರೈಸುತ್ತೇವೆ.

# ನಾತಿ ಚರಾಮಿ

ಕೈಯ ಬೆರಳುಗಳಿಂದ ಕಣ್ಣಂಚಿನ ನೀರು ಒರೆಸಿಕೊಂಡ. ಎದುರಿಗೆ ಕುಳಿತಿದ್ದರು ಇಬ್ಬರೂ. ಆಕೆಗೆ ಯಾಕೊ ಮನದಲ್ಲಿ ತಳಮಳಮಳವಾಗತೊಡಗಿತು. ಹೇಗಿದ್ದ ವ್ಯಕ್ತಿ ಹೇಗಾಗಿದ್ದಾನೆ. ಯಾವಾಗಲೂ ಅತ ಶುಭ್ರ ವಸ್ತ್ರದಲ್ಲಿರುವಾತ. ಶ್ರೀಮಂತ ವ್ಯಾಪಾರಿ. ದಾನ ಧರ್ಮಗಳಿಗೆ ಎತ್ತಿದ ಕೈ. ಇದ್ದರೂ ಹೀಗಾಗಬೇಕೇ? ಬದುಕಿನಲ್ಲಿ ಯಾವುದು ಸ್ಥಿರವಾದುದು. ಆತ ಸಂಚಯಿಸಿಕೊಂಡ ಪುಣ್ಯ ಎಲ್ಲಿ ಹೋಯಿತು? ಮಾಡಿದ ದಾನವೆಲ್ಲ ವ್ಯರ್ಥವಾಯಿತೇ? ಆಕೆಯ ಮನದಲ್ಲಿ ವಿಚಾರಗಳು ಬರುತ್ತಲೆ ಇದ್ದವು. ಆಗುವದನ್ನು ಯಾರಿಗೆ ತಡೆಯಲು ಸಾಧ್ಯ.

ವಿಸ್ತಾರದ ಪಲ್ಲಂಗ, ಅದರ ಮೇಲೆ ಶುಭ್ರವಾದ ಹಾಸಿಗೆ,ಕೈ ಕಸೂತಿ ಮಾಡಿದ ಹೊದಿಕೆ,ಎತ್ತಿ ಕಟ್ಟಿದ ಸೊಳ್ಳೆ ಪರದೆ, ಆಕರ್ಷಕ ಹೊದಿಕೆಯಲ್ಲಿರುವ ತಲೆದಿಂಬು. ವಿಸ್ತಾರವಾದ ಪಲ್ಲಂಗದ ಮೇಲೆ ಕುಳಿತುಕೊಂಡಾತ ಒಬ್ಬನೆ. ಎಡಗಡೆಗೆ ಇರುವ ಕಿಟಕಿಯಿಂದ ಬರುತ್ತಿರುವ ತಂಗಾಳಿ. ವಿಶ್ರಾಂತ ಜೀವನಕ್ಕೆ ಇಷ್ಟು ಸಾಕಲ್ಲವೆ.

ಆದರದು ವಿಶ್ರಾಂತವಾಗಿರಲಿಲ್ಲ. ಎರಡು ತಿಂಗಳ ಹಿಂದೆ ಪಾರ್ಶ್ವ ರೋಗಕ್ಕೆ ತುತ್ತಾಗಿದ್ದನಾತ. ಬಲಭಾಗ ಘೂರ್ಣವಾಗಿ ನಿಷ್ಕ್ರೀಯವಾಗಿತ್ತು. ಮಾತುಗಳಿಗೆ ಧ್ವನಿ ಬರದಾಗಿತ್ತು. ಏನಾದರೂ ಹೇಳಬೇಕೆನಿಸಿದರೆ ಆಂ , ಊಂ. ಇಷ್ಟೆ ಸಾಧ್ಯವಾಗುತ್ತಿತ್ತು. ಈ ಧ್ವನಿ ಕೇವಲ ಹೆಂಡತಿಗೆ ಆರ್ಥವಾಗುತ್ತಿತ್ತೇನೊ. ಕ್ಷಣಕ್ಕೊಮ್ಮೆ ಕಣ್ಣಿಂದ ನೀರು ಬರುತ್ತಿತ್ತು. ಅಸಹಾಯಕತೆ. ಆತ ಕುಳಿತಿದ್ದ. ಅವನೆದುರಿಗೆ ಅವರಿಬ್ಬರು ಗಂಡ ಹೆಂಡತಿ. ಈತ ವ್ಯಾಪಾರಿ, ಅವರು ನೌಕರಿ ಮಾಡುವವರು. ಸ್ನೇಹಕ್ಕೆ ಸಾಮಾಜಿಕ ಅಂತಸ್ತು ಅಡ್ಡ ಬಂದಿರಲಿಲ್ಲ. ಆತನಿಗೆ ಅನಾರೋಗ್ಯವೆಂದು ಭೇಟಿಯಾಗಲು ಬಂದಿದ್ದರು.

ಆತ ಕ್ಷಣಕ್ಕೊಮ್ಮೆ ಕೈಯತ್ತಿ ಆಂ ಊ ಎನ್ನುತ್ತ ಸ್ವರ ತೆಗೆಯುತ್ತಿದ್ದ. ಕಣ್ಣಿಂದ ನೀರು ಒರಸುತಿದ್ದ. ಇಬ್ಬರೂ ಆತನಿಗೆ ಸಾಂತ್ವನ ಹೇಳುತ್ತಲೇ ಇದ್ದರು. ಅತನ ಹೃದಯದ ಭಾಷೆ ಅವರಿಗೆ ಅರ್ಥವಾಗುತ್ತಿರಲಿಲ್ಲ. ಅವರಿಗೆ ತಿಳಿಯುತ್ತಿದ್ದುದು ಸಧ್ಯಕ್ಕೆ ಅಗತ್ಯವಿದ್ದ ಔಪಚಾರಿಕತೆಯ ಅವಶ್ಯಕತೆ ಮಾತ್ರ. ಕುರ್ಚಿಯಲ್ಲಿ ಕುಳಿತುಕೊಂಡ ಹೆಂಡತಿ ನೊಂದುಕೊಳ್ಳುತ್ತಾ, ಮರುಕಪಡುತ್ತಾ ಹೇಳಿದಳು.'ಧೈರ್ಯ ತೆಗೆದುಕೊಳ್ಳಿ ದೇವರಿದ್ದಾನೆ.' ಅತೀ ಮೆಲ್ಲಗೆ ಹೇಳಿದ ಗಂಡ 'ಹಾಗೆನ್ನ ಬೇಡ, ಅವರಿಗೆ ಮತ್ತಷ್ಟು ದುಃಖವಾಗುತ್ತದೆ, ಎಲ್ಲ ಒಳ್ಳೆಯದಾಗುತ್ತೆ ಅಂತ ಹೇಳು'.ಆಕೆ ಸುಮ್ಮನಾದಳು. ಪುನಃ ಅವನನ್ನು ನೋಡಿದಳು. ಕಣ್ಣಂಚಿನ ನೀರನ್ನು ಒರೆಸಿದ. ಶುಭ್ರವಾದ ಉಡುಪಿನಲ್ಲಿದ್ದ. ಆದರೆ ದಾಡಿ ಬೆಳೆದಿದ್ದವು, ಮುಖದಲ್ಲಿ ಗೆಲುವಿರಲಿಲ್ಲ. ಕೆಂಪಗೆ ಆದ ಕಣ್ಣುಗಳು ಅವನ ದುಃಖವನ್ನು ಪ್ರತಿಬಿಂಬಿಸುತ್ತಿದ್ದವು. ಮನವನ್ನು ತುಂಬಿದ ದುಃಖವನ್ನು ವ್ಯಕ್ತಪಡಿಸಲಿಕ್ಕಾಗದೇ ಆತ ಎಡಗೈಯನ್ನೆತ್ತಿ ಹಾಂ ಹಾಂ ಎನ್ನುತ್ತ ಪ್ರಶ್ನೆ ಹಾಕುವಂತೆ ಕೈ ತಿರುಗಿಸಿದ. ಆಕೆಗೇನೂ ತಿಳಿಯಲಿಲ್ಲ. ಕುರ್ಚಿಯಲ್ಲಿದ್ದಾತ ಹೇಳಿದ, 'ಏನೂ ಆಗಿಲ್ಲ ಎಲ್ಲ ಸರಿ ಹೋಗುತ್ತದೆ, ಸಮಯಕ್ಕೆ ಸರಿಯಾಗಿ ವೈದ್ಯಕೀಯ ಸಲಹೆ ಮತ್ತು ಉಪಚಾರ ಸಿಕ್ಕಿದುದರಿಂದ ಏನೂ ಸಮಸ್ಯೆ ಇಲ್ಲ, ನೀವು ನಗು ನಗುತ್ತಾ ಇರಬೇಕು, ಧೈರ್ಯವಾಗಿರಬೇಕು, ಸ್ವಲ್ಪ ಸಮಯ ಹಿಡಿದೀತು ಆದರೆ ಎಲ್ಲವೂ ಸರಿಯಾಗುತ್ತದೆ.' ಅವನನ್ನು ಆ ಸ್ಥಿತಿಯಲ್ಲಿ ನೋಡುತ್ತಿರುವಾಗ ಆಕೆಗೆ ತಳಮಳವೆನಿಸುತ್ತಿತ್ತು. ಆತನ ಹೆಂಡತಿ ಹೊರಗೆ ಯಾರೊಂದಿಗೊ ಮಾತಾಡುತ್ತಿದ್ದಳು. ಅವರೂ ಈತನ ಭೇಟಿಗೇ ಬಂದಿದ್ದರು. ಅನಾರೋಗ್ಯವಾದಾಗ ಎಲ್ಲರೂ ಬರುವವರೆ. ನೋವನ್ನು ಯಾರೂ ತೆಗೆದುಕೊಳ್ಳುವದಿಲ್ಲ ಆದರೆ ಬರದಿದ್ದರೆ ಹೇಗೆ, ಕೆಲವರು ಮರುಕ ತೋರಿಸಿದರೆ ಕೆಲವರು ಗಾಯವನ್ನು ಹಿಂಡಿದ ತರ ಮಾತಾಡುವವರು, ಇನ್ನು ಕೆಲರು ಅನುಕಂಪ ತೋರುವವರು. ಭಿನ್ನ ಭಿನ್ನ ಪ್ರಕೃತಿಯವರು. ರೋಗಿ ಏನು ಬಯಸುತ್ತಾನೆ ಎನ್ನುವದನ್ನೆ ಅವರು ನೋಡರು.

ಬರುಹೋಗುವವರ ಸಂಖ್ಯೆ ಏನೂ ಕಡಿಮೆ ಇರಲಿಲ್ಲ. ಬಂದವರೊಂದಿಗೆ ನಾಲ್ಕು ಮಾತನ್ನಾಡಿ, ಅವರು ಹೊರಹೋಗುವಾಗ ಬಾಗಿಲವರೆಗೆ ಹೋಗಿ ಅವರನ್ನು ಕಳಿಸಿ ಒಳಬರುತ್ತಲೆ ಮತ್ತಾರೊ ಬರುತ್ತಿದ್ದರು.ಗಂಡನ ಜೊತೆಗೆ ಕುಳಿತು ಮಾತಾಡಲು ಆಕೆಗೆ ಸಮಯವೆ ಇರಲಿಲ್ಲ, ಅಥವಾ. . . .

ಆತನಿಗೆ ಮಾತಾಡಲು ಸಾಧ್ಯವೂ ಇಲ್ಲ. ಪಾರ್ಶ್ವವಾಯು ಆ ಬಲವನ್ನು ಕಿತ್ತುಕೊಂಡಿತ್ತು. ಎದ್ದು ಹೋಗಲೂ ಸಾಧ್ಯವಿಲ್ಲ. ಸಂಗಾತಿ ಬಂದು ತನ್ನ ಪಕ್ಕದಲ್ಲಿ ಕುಳಿತುಕೊಳ್ಳಬೇಕೆಂಬ ಇಚ್ಛೆಯಿದ್ದಿರಬಹುದೆ, ಹೇಗೆ ವ್ಯಕ್ತಪಡಿಸಿಯಾನು. ಸಧ್ಯಕ್ಕೆ ಆತ ಆ ಕೊಠಡಿಯಲ್ಲಿ ಬಂಧಿತ.

ಯಾರು ಬಂದಿಗಳಿಲ್ಲ. ನಮ್ಮ ನಮ್ಮ ವಿಚಾರಗಳ ಸುರುಳಿಯಲ್ಲಿ/ಚಕ್ರದಲ್ಲಿ ಸುತ್ತಿಕೊಂಡು ಬಂದಿಯಾಗಿರುವದಿಲ್ಲವೆ. ಜ್ಞಾನಿಗಳು ಅದಕ್ಕೇ ಹೇಳಿರಬಹುದೆ ಸಂಸಾರವನ್ನು ಭವರೋಗವೆಂದು. ಆಕಸ್ಮಿಕ ಆತನ ಹೆಂಡತಿ ಒಳಬಂದಳು. ಆತ ಕೈ ಎತ್ತಿ ಧ್ವನಿ ತೆಗೆದ. 'ಏನನ್ನೊ ಹೇಳಬಯಸುತ್ತಿರಬಹುದು ಪೆನ್ನು ಕೊಡಿ ಬರೆದು ತೋರಿಸಲಿ.' ಕುರ್ಚಿಯಲ್ಲಿದ್ದಾತ ಹೇಳಿದ.

'ಎಡಗೈಯಿಂದ ಬರೆಯುವ ರೂಢಿ ಇಲ್ಲ'.ನಿರ್ವಿಕಾರವಾಗಿ ಉತ್ತರಿಸಿದಳು. ಆತ ಕೈ ಕೆಳಗೆ ಮಾಡಿದ. ಕಣ್ಣಂಚಿನಲ್ಲಿ ನೀರು ಕಾಣಿಸಿಕೊಂಡಿತು.ಸ್ವಲ್ಪ ಹೊತ್ತು ಎಣ್ಣೆಯಿಂದ ಆತನ ಕೈ ಕಾಲುಗಳನ್ನು ತಿಕ್ಕಿದಳು. ಪುನಃ ಹೊರಹೋದಳು ಯಾವದೊ ನಿಮಿತ್ಯಕ್ಕೆ. ಆತ ತಲೆ ತಗ್ಗಿಸಿದ. ಆಕೆಗೆ ಬೇಸರವಾಗಿರಬಹುದೆ, ಎರಡು ತಿಂಗಳ ಮೇಲಾಯಿತಲ್ಲ. ಹೆಂಡತಿ ಎದುರಿಗೆ ಇದ್ದರೆ ಎಂಟಾನೆಯ ಬಲ.ಈ ನೋವನ್ನು ಝಾಡಿಸಿ ಒಗೆಯಬಹುದಿತ್ತು. ಅಥವಾ ಆಕೆ ಆತನ ಹಾಂ ಹಾಂ ಎನ್ನುವ ಭಾವವನ್ನು ಅರ್ಥಮಾಡಿಕೊಳ್ಳಬಹುದಿತ್ತೇನೊ. ಅವಳಿಗೆಲ್ಲಿದೆ ಸಮಯ.

ಹೀಗಾಗುವದಕ್ಕೆ ಮೊದಲು, ಆತ ಯಾವಾಗಲೂ ದೇವರ ನಾಮವನ್ನು ಪಠಿಸುತ್ತಾ ಇರುವ ಜನ. ಒಂದು ಕ್ಷಣವೂ ವ್ಯರ್ಥವಾಗಿ ಕಳೆದವನಲ್ಲ. ವ್ಯವಹಾರ ಅಥವಾ ಮಂತ್ರ ಪಠಣ. ಮಂತ್ರ ಅಂದರೆ ಒಂದು ನೋಟಬುಕ್ಕಿನಲ್ಲಿ ರಾಮನಾಮವನ್ನು ಬರೆಯುತ್ತಿದ್ದುದು.

ಒಳಗೆ ಹೊರಗೆ ಓಡಾಡುತ್ತಾ ಎಲ್ಲರೊಂದಿಗೆ ಮಾತಾಡುತ್ತ, ಮುಖದಲ್ಲಿ ಅಸಮಾಧಾನವೊ ದುಃಖವೊ ತಿಳಿಯದಂತಹ ಭಾವ ಹೊತ್ತುಕೊಂಡು ಹೋಗುವವರನ್ನು ಬೀಳ್ಕೊಡುತ್ತಾ ಬರುವವರನ್ನು ಸ್ವಾಗತಿಸುತ್ತಾ ಇದ್ದಳಾಕೆ. ಕೆಲವೇ ತಿಂಗಳುಗಳ ಹಿಂದೆ ಮಗಳ ಮದುವೆಯ ಸಮಾರಂಭದಲ್ಲಿ ಅತ್ಯಂತ ಸುಂದರವಾಗಿ ಅಲಂಕರಿಸಿಕೊಂಡು ಇಬ್ಬರೂ ಒಟ್ಟೊಟ್ಟಿಗೆ ಎಲ್ಲರನ್ನು ಸ್ವಾಗತಿಸುತ್ತ ಕೈಕುಲುಕುತ್ತಿದ್ದರೆ, ಅನೇಕ ಸ್ನೇಹಿತರು ಹಾಸ್ಯಮಾಡಿದ್ದರು, 'ಮದುವೆ ಯಾರಿಗೆ?' 'ಮಗಳಿಗೇ'. ನಗುಮುಖದಿಂದ ಉತ್ತರಿಸಿದ್ದರು ಇಬ್ಬರೂ.

ಈಗಾಕೆ ಇಬ್ಬರನ್ನೂ ನೋಡಿ ನೆನಪಿಸಿಕೊಂಡಳು. ಅಜಗಜಾಂತರ. ಒಬ್ಬರು ಹಾಸಿಗೆಯ ಮೇಲೆ ಬಂದಿಯಂತೆ. ಕೆದರಿದ ತಲೆ, ಬೆಳೆದ ಗಡ್ಡ ಮೀಸೆ, ಯಾವಾಗಲೂ ತುಳುಕಲು ಸಿದ್ಧವಾದ ಕಣ್ಣಬಿಂದು, ದುಃಖಪೂರಿತ ಮುಖ, ಅಸಹಾಯಕ ನೋಟ ಮತ್ತು ವಿಶ್ವಾಸ ಕುಸಿಯುತ್ತಿರುವದಕ್ಕೆ ಸಾಕ್ಷಿಯಾಗಿರುವ ಕೃಷವಾದ ಶರೀರ. ತೀರ ಪರಿಚಿತರು ಬಂದರೆ ಹಾಂ ಹಾಂ ಎಂದು ಪ್ರಶ್ನೆ ಕೇಳುವಂತೆ ಕೈ ಎತ್ತುವ ಭಂಗಿ. ಈಕೆ ಒಪ್ಪವಾಗಿ ತಲೆಬಾಚಿ, ಹಣೆಗೆ ಕುಂಕುಮವಿಟ್ಟು, ಒಳ್ಳೆ ಸೀರೆಯನುಟ್ಟು ಒಳಹೊರಗೆ ಓಡಾಡುತ್ತ, ಕೆಲವರೊಂದಿಗೆ ನಗುತ್ತಾ ದುಃಖದ ಪ್ರದರ್ಶನ ಮಾಡುತ್ತಾ ಅಥವಾ ನಿರ್ಲಿಪ್ತತೆಯೊ. . . .

ಕುರ್ಚಿಯಲ್ಲಿ ಕುಳಿತವಳಿಗೆ ಇದನ್ನು ನೋಡಲಾಗಲಿಲ್ಲ. 'ಇನ್ನು ಹೋಗೋಣವೆ?' ಕೇಳಿದಳು. ಎದ್ದು ನಿಂತು ಆತ ಅವನ ಎಡಗೈ ಕುಲುಕಿದ ಹೇಳಿದ. 'ದುಃಖ ಮಾಡಿಕೊಳ್ಳಬೇಡಿ, ಗಟ್ಟಿಮನಸ್ಸು ಮಾಡಿ, ಮತ್ತೆ ಬರುತ್ತೇವೆ, ಆಗ ಚೆನ್ನಾಗಿ ಮಾತಾಡೋಣ, ಬೇಗನೇ ಮಾತಾಡುವಂತಾಗಿ.' ಕೆಂಪಾದ ಕಣ್ಣಿಂದಲೇ ತಲೆಯಾಡಿಸಿದನಾತ.

ಇಬ್ಬರೂ ಹೊರಬಂದರು. ಹೊರಗೆ ನಿಂತಿದ್ದ ಆತನ ಹೆಂಡತಿಗೆ ಹೇಳಿದರು ನಾವಿನ್ನು ಬರುತ್ತೇವೆ. ತಲೆಯಾಡಿಸುತ್ತ ಆಕೆ ಅವನಿದ್ದ

(ಪುಟ 12ಕ್ಕೆ)

# ಇಲ್ಲೊಂದು ಆತ್ಮಕತೆ

ಈ ಮೊದಲೆ ಕರ್ನಾಟಕದಲ್ಲಿ ಹಲವಾರು, ಪತ್ರಿಕೆಗಳಾದ ಪ್ರಜಾವಾಣಿ, ವಿಜಯ ಕರ್ನಾಟಕ, ಕನ್ನಡ ಪ್ರಭ, ನವೋದಯ, ಇಂಡಿಯಾ ಟುಡೆ, ಮುಂತಾದ ಪತ್ರಿಕೆಯಲ್ಲಿ "ಗೊಂದಲಿಗ್ಯಾ" ಎ.ಎಂ. ಮದರಿಯವರ ಆತ್ಮಕತೆಯ ಬಗ್ಗೆ ಹಲವಾರು ಸಾಹಿತಿಗಳು ಮೆಚ್ಚುಗೆ ವ್ಯಕ್ತಪಡಿಸಿದ ಲೇಖನಗಳು ಬಂದಿವೆ. ಕರ್ನಾಟಕದಲ್ಲಿ ಈಗ ತುಂಬಾ ಪ್ರಸಿದ್ಧವಾಗುತ್ತ ಇರುವ ಆತ್ಮಕತೆ, ಮರಾಠಿ ದಲಿತಕತೆ, ಹೋಲುವ ಇದಲ್ಲದೆ ಈ ಕೃತಿಯ ಸಿನಿಮಾ ಶೂಟಿಂಗ್ ಕೂಡ ಮುಗಿದಿದೆ. 'ಅಮರದೇವ್' director ಬೆಂಗಳೂರು ಇವರ ನಿರ್ದೇಶನದಲ್ಲಿ.

ನನ್ನ ಗುರುಗಳಾದ ಎ.ಎಂ.ಮದರಿಯವರ ಪುಸ್ತಕ ವಿಮರ್ಶೆ, ಮಾಡುವಷ್ಟು ಪ್ರತಿಭಾನ್ವಿತ ನಾನಲ್ಲದಿದ್ದರೂ, ಅನಿಸಿಕೆಗಳನ್ನು ಹೊರಚೆಲ್ಲುವ ಹಂಬಲ ನನ್ನಲ್ಲಿದೆ.

ನನ್ನ ಗುರುಗಳಾದ ಎ.ಎಂ.ಮದರಿಯವರ ಪುಸ್ತಕ ವಿಮರ್ಶೆ ಮಾಡುವಷ್ಟು ಪ್ರತಿಭಾನ್ವಿತ ನಾನಲ್ಲದಿದ್ದರೂ ಅನಿಸಿಕೆಗಳನ್ನು ಹೊರಚೆಲ್ಲುವ ಹಂಬಲ ನನ್ನಲ್ಲಿದೆ.

ಪೈಥಾಗೊರಸನ ಪ್ರಮೆ, ಗಣಿತದ ಸೂತ್ರ, ವಿಜ್ಞಾನದ formula ಗಳನ್ನು ಹೇಳಿಕೊಡುತ್ತಿದ್ದ ಗುರುಗಳ ಜೀವನದಲ್ಲಿ ಇಷ್ಟೊಂದು ಜಟಿಲ ಸಮಸ್ಯೆಯಿಂದ ಶಿಕ್ಷಕರಾಗಿ ಮೇಲೆ ಬಂದದ್ದು ಅವರ ಆತ್ಮಕತೆಯನ್ನು ಮುಂಬೈಯಲ್ಲಿ ಓದಿದ ನಂತರವೆ ಗೊತ್ತಾಗಿದ್ದು, ಅದೆಷ್ಟು ಹಿಂಸೆ ಅನುಭವಿಸಿದ್ದಾರೆ. ಅಬ್ಬಬ್ಬಾ ಓದಿದರೆ ಮೈ ನರಗಳೆಲ್ಲ ರೋಮಾಂಚನವಾಗುತ್ತವೆ.

ಪುಟ್ಟಿಯಲ್ಲಿ ಸ್ಟೆಶನರಿ ಸಾಮಾನು ಹೊತ್ತು ಮಾರುವ ಅವ್ವನಹಿಂದೆ ಹಳ್ಳಿ ಹಳ್ಳಿಗೆ ಹೋಗುವ ಸೂಕ್ಷ್ಮ ಗ್ರಹಿಕೆಯ ಲೇಖಕರು ಅವ್ವನ ಗರ್ಭಪಾತದ ಹೃದಯಸ್ಪರ್ಶಿ ಘಟನೆಗಳ ತಟ್ಟುವಿಕೆ ಇದೆಯಲ್ಲ, ಅದು ಓದುಗರ ಮನಸ್ಸನ್ನು ತಟ್ಟುತ್ತದೆ.

ಕೆಲವಾರು ಗುರುಗಳಿಂದ ಹಲವಾರು ಗೆಳೆಯರಿಂದ ವಿಕೃತ ಭಾವನೆಯ ಮತ್ತಲವಾರು ಮನಸ್ಸಿನ ಸಮಾಜದಲ್ಲಿಯೂ ಸಹ ಅನುಭವಿಸಿದ ರೀತಿ ಮನಸ್ಸಿಗೆ ತುಂಬಾ ನೋವುಂಟು ಮಾಡುತ್ತದೆ. ಅವರ ಸಹನಶಕ್ತಿ ಅದೆಂತ ಗಟ್ಟಿಯಾದದ್ದು ಆಶ್ಚರ್ಯ, ಆದರೂ ಸತ್ಯ.

ಸಹಪಾಠಿ ತಿಮ್ಮನಗೌಡ (ದೊಡ್ಡವರ ಮೊಮ್ಮಗ)ನ ಕಳ್ಳತನವನ್ನು ಇವರ ಮೇಲೆ ಹೇರಿ ಅಮಾಯಕ, ನಿರ್ದೂಷಿಯಾದ ಲೇಖಕರನ್ನು ಕಂಬಕ್ಕೆ ಕಟ್ಟಿ ಬಡಿಯುವ ರೀತಿ, ಸಮಾಜದಲ್ಲಿರುವ ಮೇಲ್ವರ್ಗದವರ ಸೊಕ್ಕಿನ ದುರ್ನಡತೆಯನ್ನು ತೋರಿಸುತ್ತವೆ. ಆಗ ಸಹಾಯಕ್ಕೆ ಬಂದ ಜಾಲಿಹಾಳ ಗುರುಗಳು ಮತ್ತು ಮಠದಲ್ಲಿಯ ಕಾಳಪ್ಪ. ಅವರ ಕರುಣೆಯಿಂದ ಮನೆಗೆ ಬಿಡುವ ರೀತಿ, ಇಲ್ಲಿ ಕಾಳಪ್ಪನ ಮಾತುಗಳನ್ನು ಲೇಖಕರು ಹಿಡಿದಿಟ್ಟಿದ್ದು ಮೆಚ್ಚುವಂತಹವು, ಬಡವರ ಮಕ್ಳು ಅಂದ್ರ ಕಳ್ರಂತ ತಿಳಿಕೊಂಡಾರ, ದುಡ್ಡಿದ್ದ ಸೂಳೆಮಕ್ಳು ಅಂದ್ರೆ ಯಾಕ್ ಉಳಿದವರನ್ನು ಬಡಿಬೇಕಿತ್ತು, ಆ ಗಂಡಸತನ ತೋರಿಸಬೇಕು, ಹಿಂದ ಮುಂದ ಕೊಳುವರಿಲ್ಲಾಂತ, ಇಂಥ ಭಿಕಾರಿಗಳ ಮ್ಯಾಲ ತಾಕತ್ತ ತೋರಿಸಿತಾರ, ಎನ್ನುವ ಮಾತುಗಳು, ಬಡವನ ಕೋಪ ದವಡೆಗೆ ಮೂಲ' ಎನ್ನುವಂತೆ ಹೊಟ್ಟ್ಯಾಗಿನ ಸಿಟ್ಟು ರಟ್ಟ್ಯಾಗಿಲ್ಲ ಎನ್ನುವ ಮಾತಿಗೆ ಪುಷ್ಠಿ ಕೊಡುತ್ತದೆ. ಬಡವರು ಎಲ್ಲವನ್ನೂ ಸಹಿಸಿಕೊಳ್ಳಲೇಬೇಕಾದಂತೆ ಪರಿಸ್ಥಿತಿಯನ್ನು ಚಿತ್ರಿಸುತ್ತದೆ. ತಾಯಿ ಸಹ ಹೆದರಿ ಮನಗ ತಪ್ಪು ಇರದಿದ್ದರೂ ಬಡಿದವರ ಮನೆಗೆ ಕಾಲಿಗೆ ಬಿದ್ದು, ಹುಡುಗ ತಿಳಿದಾ ತಪ್ಪು ಮಾಡೈತಿ, ಮತ್ತೆ ಹೊಡೆದು, ಸಾಯಸಬೇಡ್ರಿ ಎನ್ನುವ ಧೀನತೆ ಕರುಳು ಕಿತ್ತು ಬರುವಂತೆ ಮಾಡುತ್ತದೆ.

ಮತ್ತೊಂದು ಪ್ರಸಂಗ, ಮೇಲ್ವರ್ಗದ ಮಕ್ಕಳು ಕೆಳವರ್ಗದ ಮಕ್ಕಳ ಜೊತೆ ಆಡುವ ಅಟ್ಟಹಾಸನ ನಡವಳಿಕೆಗೆ ಕನ್ನಡಿ ಹಿಡಿದಂತಿದೆ, ಬಸಯ್ಯ ಗುಡಿ ಪೂಜಾರಿಯ ಮಗ ಮತ್ತು ಖಾಜಾಮರ ಇವರಿಂದ ಅನುಭವಿಸಿದ ರ್‍ಯಾಗಿಂಗ್ ಅಂದಿನ ಕಾಲಕ್ಕೆ ಲೇಖಕರು ಅನುಭವಿಸಿದ ಬತ್ತಲೆ ಆಟ ಮನ ಮಿಡಿಯುತ್ತದೆ.

ಇನ್ನೊಂದು ಘಟನೆ ಹಕ್ಕಪಕ್ಕಿಯವರ ಶ್ರೀಮಂತ ಹುಡುಗ ಗಟ್ಟಿಯಾದ ಕಟ್ಟಿಗೆಯಿಂದ ಮೊಣಕಾಲಿಗೆ ಮತ್ತು ಡಬ್ಬಕ್ಕೆ ಹೊಡೆದದ್ದು ಆಗ ಅನುಭವಿಸಿದ ಯಾತನೆ ಅವರಿಗಾದ ನೋವು, ಮಗದೊಂದು ಪ್ರಸಂಗ, ಹೊಳೆಯ ದಂಡೆಯ ಮೇಲೆ ಆದ ಮತ್ತದೆ ಸಿರಿವಂತರ ಮಕ್ಕಳಿಂದ ಲೇಖಕರನ್ನೂ ನೂಕಿದಾಗ ಅಲ್ಲೆ ಇರುವ ಆರೇಳು ಇಂಚು ಇರುವ ಬೊಡ್ಡೆಯು ಅವರ ತೊಡೆಗೆ ನಾಟಿ ಸುಮಾರು ಮಾಂಸ ಅಲ್ಲಿಯೆ ಬಿದ್ದು ಮೂರ್ಛೆ ಹೋದದ್ದು, ಓದುಗರಿಗೆ, ನಮಗರಿವಿರದಂತೆ ಕಣ್ಣೀರು ದಳದಳ ಹರಿಯುತ್ತವೆ.

ಅವ್ವನ ಅಳು, ತಂದೆಯ ಅಸಹಾಯಕತೆಯ ಮಾತು "ನಾವು ಈ ದರಿದ್ರ ಜಾತಿಯೊಳಗೆ ಹುಟ್ಟಿದ್ದರಿಂದ ಯಾರ್ ಏನ್ ಮಾಡಿದ್ರು ಜೀವಲ್ಲಂಗಿರಬೇಕಾಗೈತಿ' ಎಂಬ ಮಾತುಗಳು, ಹೃದಯ ಸ್ಪರ್ಶಿಸುವಂತೆ, ವಿಚಾರಕ್ಕೀಡು ಮಾಡುತ್ತವೆ.

ಹೀಗೆ ದಾರ್ಜನ್ಯ ನಡೆಸಿದ ಎಷ್ಟೋ ಕುಟುಂಬಗಳು ಹೇಳ ಹೆಸರಿಲ್ಲದಂತಾಗಿದ್ದು, "ಕಾಲ ಎನ್ನುವುದು ದೊಡ್ಡ ನ್ಯಾಯಾಧೀಶ" ಎನ್ನುವ ಲೇಖಕರ ಮಾತು ಬಹು ಅರ್ಥಗರ್ಭಿತವಾಗಿದೆ. ಸಮಾಜದಲ್ಲಿ ಎಂತಹ ಕ್ರೂರ ಮನಸ್ಸಿನ, ವಿವೇಚನೆ ಇಲ್ಲದ ಮನುಷ್ಯ ಮನುಷ್ಯರ ನಡುವಿನ ಭಾವನೆಯ ಕೊರತೆ, ನನಂತೆ ಅವರು ಸಹ ಅವರಿಗಾದ ಸ್ಥಿತಿ ನನಗೆ ಆಗಿದ್ದರೆ? ಅವರಂತೆ ನಾನು ನೋವು ಅನುಭವಿಸಿದ್ದರೆ? ಎಂದು ಯೋಚಿಸಿದರೆ ಕೆಳದರ್ಜೆಯವರ ಮೇಲೆ ಮನಬಂದಂತೆ ನಡೆದುಕೊಳ್ಳುವ ಇಂತಹ ವಿಕೃತ ಮನಸ್ಸುಗಳಿಗೆ ಧಿಕ್ಕರವಿರಲಿ.

ತಾಯಿಯೂ, ಕ್ಯಾನ್ಸರಿಂದ ಬಳಲುವಿಕೆ, ತಾಯಿ ಅನುಭವಿಸಿದ ಯಾತನೆ, ಎಂತಹವರಿಗೂ ಕರುಳು ಕಿತ್ತು ಬರುತ್ತದೆ. ತಂದೆ ಜನಪದ ಕವಿಯಾಗಿ, ನಾಟಕಕಾರನಾಗಿ ಆಶುಕವಿಯಾಗಿದ್ದರೂ, ಅವರ ಅವರ ಜಾತಿಯ ಜನರಲ್ಲೆ ಅಪರೂಪದವರಾಗಿದ್ದರೂ ಸಹ ಮೇಲೆ ಬರಲು ಆಗಲಿಲ್ಲ ಎನ್ನುವ ನೋವು ಲೇಖಕರಲ್ಲಿದೆ.

ಜಾತೀಯತೆಯಿಂದ ಎಷ್ಟೊಂದು ಜನರಿಂದ ಅವಮಾನಗೊಂಡಿದ್ದಾರೆ ಬೇರೆ ಯಾರಾದರೂ ಅವರ ಸ್ಥಾನದಲ್ಲಿದ್ದಿದ್ದರೆ ಭ್ರಮ ನಿರಸನರಾಗುತ್ತಿದ್ದರು. ದೈಹಿಕವಾಗಿ, ಮಾನಸಿಕವಾಗಿ, ಆಘಾತಗೊಳಿಸಿದ ಇಂತಹ ಸಮಾಜದ ಎದುರೆ – ಅವೇ ಊರಲ್ಲ, S.S.L.C. ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿ, ಮುಂದೆ ಕಾಲೇಜು, ವಿದ್ಯಾಭ್ಯಾಸ ಮುಗಿಸಿದ ಲೇಖಕರ ತಾಯಿಗೆ "ನಿನ್ನ ಮಗ ಶಾಣ್ಯಾ" ಅದಾನ ಮುಂದ, ನಿನಗ ಸುಖವಾಗಿಡತಾನ ಎನ್ನುವ ಓಣಿಯವರ ಮತು ಕೇಳಿದ ಸಂತೋಷ ಮಾತ್ರ ತಾಯಿಯದು.

ಒಂದು ದಿನ ಸುಖಕಾಣದ ಅವ್ವ, ನಡುವಯಸ್ಸಿನಲ್ಲಿ ಮಣ್ಣಾಗಿದ್ದು, ಎಂತಹವರಿಗೂ ಕೆಟ್ಟ ಅನಿಸುತ್ತದೆ. ತಾವು ಮಗನ ಸುಖ ಕಾಣದಿದ್ದರೂ ಸಮಾಜ ಗುರುತಿಸುವಂತ ಒಬ್ಬ ಅಪ್ರತಿಮ, ಪುತ್ರನನ್ನು ಕೊಟ್ಟಂತ ಹೆಗ್ಗಳಿಕೆ ಆ ಮಾತಿಗೆ ಸಲ್ಲುತ್ತದೆ.

ಇಂತಹ ಗುರುಗಳು ನನ್ನ ತವರೂರಾದ ಕನಕಗಿರಿಯಲ್ಲಿ 1947 ರಿಂದ 1985 ರವರೆಗೆ ಹನ್ನೊಂದು ವರುಷಗಳ ಸೇವೆ ಸಲ್ಲಿಸಿದ್ದಾರೆ, ಒಬ್ಬೊಬ್ಬರ ಮನೆಯಲ್ಲಿ 3–4 ವಿದ್ಯಾರ್ಥಿಗಳಂತೆ ಇವರ ಬೋಧನೆಯನ್ನು ಪಡೆಯುವ ಅವಕಾಶ ದೊರೆತದ್ದು ನಮ್ಮೆಲ್ಲರ ಭಾಗ್ಯ ಎಂದೇ ಹೇಳುತ್ತೇವೆ.

ಗುರುಗಳು ಪಾಠ ಮಾಡುವ ರೀತಿ ತುಂಬಾ ಅಚ್ಚುಕಟ್ಟಾಗಿತ್ತು. ಅವರ memory power ತುಂಬಾ ತೀಕ್ಷ್ಣವಾದದ್ದು, ಎಷ್ಟು GB ಅಂತ ಗೊತ್ತಿಲ್ಲ. ಅಂತಹ memory card ಅವರ ಮೆದುಳಿನಲ್ಲಿದೆ. ಶಿಸ್ತು, ನಿಷ್ಠಾವಂತ ಸೇವೆ, ಶ್ರಮ ಜೀವಿಗಳಾಗಿದ್ದರೂ, ವಿಜ್ಞಾನದ ಶಿಕ್ಷಕರಾಗಿದ್ದರೂ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉತ್ತಮ ಕೊರಿಯೋಗ್ರಾಫರ್ ಆಗಿದ್ದರು. ಹಲವಾರು ವಿಮರ್ಶೆ, ಕತೆಗಳನ್ನು ಬರೆಯುತ್ತಿದ್ದರು.

KAS ಪರೀಕ್ಷೆ ಪಾಸು ಮಾಡೀ ಉನ್ನತ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ಇವರು 'ಗೊಂದಲಿಗ್ಯಾ' ಆತ್ಮಕತೆಯನ್ನು ಅತ್ಯಂತ ಪ್ರಾಮಾಣಿಕವಾಗಿ ಯಾವುದೇ ಮುಚ್ಚು ಮರೆಯಿಲ್ಲದೆ ಬಿಚ್ಚಿಟ್ಟಿದ್ದಾರೆ.

*(ಪುಟ 12ಕ್ಕೆ)*

# ಶ್ರೀ.....

ದೀಪಾ ಆಫೀಸಿನಲ್ಲಿ ಬಿಡುವಿನ ವೇಳೆಯಾದ್ದರಿಂದ ತನ್ನ ಕಂಪ್ಯೂಟರ್‌ನಲ್ಲಿ ಜಿ. ಮೈಲ್ ID ಓಪನ್ ಮಾಡಿ ನೋಡಿದಾಗ facebook ನ ನಾಲ್ಕಾರು ಜನರ ಫ್ರೆಂಡ್‌ಶಿಪ್‌ನ ರಿಕ್ವೆಸ್ಟ್ ಇದ್ದಿತ್ತು. ಅವರೆಲ್ಲ ಪರಿಚಯದವರೇ ಆಗಿದ್ದರು. ಇನ್ನೊಂದು ಹೆಸರು ಮಾತ್ರ ಅಪರಿಚಿತ "Shri kumar wants to be friends on facebook" ಎಂಬ ಮೆಸೇಜ್ ಇತ್ತು. ದೀಪಾಳಿಗೆ ಅವನು ಯಾರೆಂದು ಪರಿಚಯವಿರಲಿಲ್ಲ. ಹಾಗಾಗಿ facebook ನಲ್ಲಿ ಆತನ ಡಿಟೈಲ್ಸ್‌ನ್ನು ನೋಡಲು ಹೋಗಲಿಲ್ಲ ಆಕೆ. ಎರಡು ಮೂರು ದಿನದ ನಂತರ ಮತ್ತೆ ಆಕೆಯ ಜಿ. ಮೈಲ್‌ನಲ್ಲಿ facebook ಗೆ ಬಂದ ಮೆಸೇಜ್ ಇತ್ತು. ಶ್ರೀ ಕುಮಾರನೆಂದು "Hello How are You ? See you soon" ಎಂದು ಬರೆದಿದ್ದ. ದೀಪಾಳಿಗೆ ಆಶ್ಚರ್ಯವಾಯಿತು. ತಾನು ರಿಕ್ವೆಸ್ಟ್ Confirm ಕೂಡಾ ಮಾಡಲಿಲ್ಲ. ಆತನದು ಮತ್ತೆ ಮೆಸೇಜ್. ಯಾರಿರಬಹುದು? ಈತನಿಗೆ ತನ್ನ ಪರಿಚಯವೇನಾದರೂ ಇರಬಹುದೇ ಎಂದು facebook open ಮಾಡಿ ಆತನ Detail ನೋಡಲಾರಂಭಿಸಿದಳು. ಆತನ ಫೋಟೋ ನೋಡಿ ದೀಪಾಳ ಬಾಯಿಯಿಂದ "oh! so handsome" ಎಂಬ ಉದ್ಗಾರ ತನ್ನಿಂತಾನೇ ಹೊರ ಬಂದಿತ್ತು. ಶ್ರೀ ಕುಮಾರ್ ಅತ್ಯಂತ ಸ್ಫುರದ್ರೂಪ ಯುವಕನಾಗಿದ್ದ. ಇಷ್ಟು ಸುಂದರನಾದ ಯುವಕನನ್ನು ತಾನು ಇದುವರೆಗೂ ಕಂಡಿಲ್ಲವೆನಿಸಿತು ದೀಪಾಳಿಗೆ. ಆಸಕ್ತಳಾಗಿ ಆತನ ಉಳಿದ ಮಾಹಿತಿಗಳನ್ನು ನೋಡಲಾರಂಭಿಸಿದಳು. ಹುಟ್ಟಿದ ಊರು- ಮಂಗಳೂರು. ಕೆಲಸದ ಸ್ಥಳ ಅಬುಧಾಬಿ. ಹುಟ್ಟಿದ ವರ್ಷ 1980 ಎಂದಿತ್ತು. ದೀಪಾಳ ಮನಸ್ಸಿಗೆ ಸಂತೋಷವಾಯಿತು, ಈತನೂ ತನ್ನ ಊರಿನವನೇ ಎಂದು. ಆದರೆ ಶ್ರೀ ಕುಮಾರ್ ವಯಸ್ಸಿನಲ್ಲಿ ಆಕೆಗಿಂತ ಐದಾರು ವರ್ಷ ಸಣ್ಣವನಾಗಿದ್ದ. ಶ್ರೀ ಕುಮಾರ್‌ನ ರೂಪ ಮಾತ್ರ ದೀಪಾಳ ಹೃದಯದಲ್ಲಿ ಅಚ್ಚೊತ್ತಿಕೊಂಡಿತ್ತು. ಆತನ friendship request ಗೆ confirm ಮಾಡಿ ಉತ್ತರ ಕಳಿಸಿದ್ದಳು ದೀಪಾ.

ಹೀಗೆ ಫೇಸ್‌ಬುಕ್‌ನ ಮುಖಾಂತರ ಪರಿಚಯವಾದ ದೀಪಾ- ಶ್ರೀ ಕುಮಾರ್ ಸಂಬಂಧ ಒಂದೇ ವಾರದಲ್ಲಿ ಪ್ರೇಮಕ್ಕೆ ತಿರುಗಿತ್ತು. ಶ್ರೀ ಕುಮಾರ್ ದೀಪಾಳನ್ನು facebook ನಲ್ಲಿ ನೋಡಿ ಆಕೆಯ ಸೌಂದರ್ಯಕ್ಕೆ ಮರುಳಾಗಿದ್ದ. ಹಾಗಾಗಿ ಆಕೆ ತನಗಿಂತ ದೊಡ್ಡವಳು ಎಂಬುವುದನ್ನು ಗಣನೆಗೆ ತೆಗೆದುಕೊಳ್ಳದೆ ಆಕೆಗೆ friendship ನ request ಕಳಿಸಿ ಆಕೆಯ ಉತ್ತರಕ್ಕೆ ಕಾಯುತ್ತಿದ್ದ. ದೀಪಾ ಕೂಡಾ ಅವನ ರೂಪ ಕಂಡು ಆತನಿಗೆ ಮರುಳಾಗಿದ್ದಳು. ಫೋನಿನ ಮೂಲಕ, ಈ ಮೈಲ್ ಮಾಡುವುದರ ಮೂಲಕ ಇವರಿಬ್ಬರೂ ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಾ ಮಾನಸಿಕವಾಗಿ ಬಹಳ ಹತ್ತಿರವಾಗಿದ್ದರು. ದೀಪಾ ತನ್ನ ವೈವಾಹಿಕ ಜೀವನದ ಎಲ್ಲಾ ದುರಂತಗಳನ್ನು ಶ್ರೀಗೆ ವಿವರವಾಗಿ ತಿಳಿಸಿದ್ದಳು. ಶ್ರೀ ಕೂಡಾ ವಿವಾಹಿತನಾಗಿದ್ದ. ಆದರೂ ಅವರಿಬ್ಬರೂ ಸಂಸಾರ ಸುಖದಿಂದ ದೂರವಿದ್ದರು. ಇಬ್ಬರೂ ಸಮಾನ ದುಃಖಿಗಳಾಗಿದ್ದರು.

ದೀಪಾಳ ವಿವಾಹ 5 - 6 ವರ್ಷಗಳ ಹಿಂದೆ ನಡೆದಿತ್ತು. ಆದರೆ ಆಕೆ ಗಂಡನೊಂದಿಗೆ ಬಾಳಿದ್ದು ಬರೀ 6 ತಿಂಗಳು ಮಾತ್ರ. ಪತಿ ಅರುಣ್ ವಿದ್ಯಾವಂತ ಹಾಗೂ ಉತ್ತಮ ಹುದ್ದೆಯಲ್ಲಿದ್ದವ. ಆದರೆ ದೀಪಾಳನ್ನು ಸುಖಿಯಾಗಿ ಇಡಲಾರದ ವಿಕೃತ ಕಾಮಿಯಾಗಿದ್ದ ಅರುಣ್. ಮದುವೆಯಾದ ದಿನದಿಂದಲೇ ಆತನ ವಿಕೃತ ಸ್ವಭಾವ ಅವಳಿಗೆ ಭಯವನ್ನುಂಟು ಮಾಡುತ್ತಿತ್ತು. ಪ್ರತಿ ಇರುಳಲ್ಲೂ ಆತ ಬಳಿ ಬಂದಾಗ ಅವಳಿಗೆ ಭಯವಾಗುತ್ತಿತ್ತು. ವಿಚಿತ್ರವಾದ ರೀತಿಯಲ್ಲಿ ಸುಖವನ್ನು ಪಡೆಯುವ ಆತನ ವೈಖರಿ ಆಕೆಗೆ ಬದುಕೇ ನರಕವಾಗುವಂತೆ ಮಾಡಿತ್ತು. ವಿಕೃತ ಕಾಮಿಯಲ್ಲದೆ ಆತನೊಬ್ಬ ಸಲಿಂಗ ಕಾಮಿ ಎಂದು ಅದೊಂದು ದಿನ ಆತ ದೃಢಪಡಿಸಿದ್ದ. ಅಂದು ಆತ ಆಫೀಸಿನಿಂದ ಮನೆಗೆ ಬರುವಾಗ ತನ್ನ ಗೆಳೆಯನೊಬ್ಬನನ್ನು ಕರೆ ತಂದಿದ್ದ. ದೀಪಾಳಿಗೆ "ಈತ ನನ್ನ ಪ್ರಾಣ ಸ್ನೇಹಿತ. ಇಂದು ರಾತ್ರಿ ಇಲ್ಲೇ ಇರುತ್ತಾನೆ. ಈತನಿಗೆ ಸೋಫಾದಲ್ಲಿ ಮಲಗಿ ಅಭ್ಯಾಸವಿಲ್ಲ. ಇದೊಂದು ರಾತ್ರಿ ನೀನು ಹೊರಗೆ ಹಾಲ್‌ನಲ್ಲಿ ಮಲಗು. ಈತ ನಮ್ಮ ಬೆಡ್‌ರೂಮ್‌ನಲ್ಲಿ ಮಲಗಲಿ ಎಂದಾಗ ದೀಪಾ ಸಂತೋಷದಿಂದಲೇ ಒಪ್ಪಿ ಹಾಲ್‌ನಲ್ಲಿ ಬಂದು ಮಲಗಿದ್ದಳು. ರಾತ್ರಿ ಎಚ್ಚರವಾದಾಗ ದೀಪಾ ನೀರು ಕುಡಿಯಲೆಂದು ಕಿಚನ್‌ನತ್ತ ಬಂದಾಗ ಎದುರುಗಡೆಯೇ ಇರುವ ತನ್ನ ರೂಮಿನಿಂದ ಏನೋ ನಗುವ, ಮಾತಾಡುವ ಶಬ್ದ ಕೇಳಿ ಬಂದಿತ್ತು. ದೀಪಾ ಮೆಲ್ಲನೆ ಬೆಡ್‌ರೂಂನತ್ತ ಬಂದಳು. ರೂಮ್ ಲಾಕ್ ಮಾಡಲಾಗಿತ್ತು. ಒಳಗಿನಿಂದ ಕಿಟಕಿ ಅರೆ ತೆರೆದಿತ್ತು. ಮೆಲ್ಲನೆ ಕಿಟಕಿ ಪೂರಾ ತೆರೆದು ನೋಡಿದಳು. ಬೆಡ್ ಲ್ಯಾಂಪ್ ಉರಿಯುತ್ತಿತ್ತು. ಅರುಣ್ ಮತ್ತು ಆತನ ಗೆಳೆಯ ಅರೆನಗ್ನರಾಗಿ ನಗು ನಗುತ್ತಾ, ಮಾತಾಡುತ್ತಾ ವಿಕೃತ ರೀತಿಯಲ್ಲಿ ಒಬ್ಬರನ್ನೊಬ್ಬರು ಭೋಗಿಸುತ್ತಿದ್ದರು. ದೀಪಾಳಿಗೆ ಇದನ್ನು ನೋಡಿ ಉಸಿರೇ ಕಟ್ಟಿದಂತಾಯಿತು. ಛೀ ! ತನ್ನ ಗಂಡ ಇಷ್ಟು ನೀಚನೇ ! ತಡೆಯಲಾರದೆ 'ಅರುಣ್' ಎಂದು ಬಾಗಿಲು ಬಡಿದಳು. ರಪ್ಪನೆ ಬಾಗಿಲು ತೆರೆದ ಅರುಣ್ ದೀಪಾಳನ್ನು ಅನಾಮತ್ತಾಗಿ ಒಳಗೆ ಸೆಳೆದುಕೊಳ್ಳುತ್ತಾ "ಬಾ, ದೀಪಾ ನಾವು ಮೂವರು ಒಟ್ಟಾಗಿ ಎಂಜಾಯ್ ಮಾಡೋಣ. ನಿಮೇಶ್‌ಗೂ ನೀನು ತುಂಬಾ ಇಷ್ಟವಾಗಿದ್ದಿ" ಎಂದಾಗ ದೀಪಾಳಿಗೆ ಕಣ್ಣು ಕತ್ತಲಾದಂತಾಯಿತು. ಅರುಣ್‌ನೇ ದೀಪಾಳನ್ನು ನಿಮೇಶ್‌ನ ಬಳಿ ನೂಕಿದಾಗ ನಿಮೇಶ್ ಕೂಡಾ ಅವಳನ್ನು ಬರಸೆಳೆದ. ದೀಪಾ ಅವರಿಬ್ಬರಿಂದಲೂ ಕೊಸರಾಡಿ ಹೊರಗೆ ಓಡಿ ಬಂದಿದ್ದಳು. ನಂತರ ಒಂದು ಕ್ಷಣವೂ ಆಕೆ ಆ ಮನೆಯಲ್ಲಿ ನಿಲ್ಲಲಿಲ್ಲ. ಮಧ್ಯರಾತ್ರಿಯೇ ತನ್ನ ತವರು ಮನೆಗೆ ಬಂದಿದ್ದಳು. ತನ್ನ ಪತಿಯ ಮೇಲೆ ಅತ್ಯಾಚಾರದ ಕೇಸ್ ಹಾಕಿ ಆತನಿಂದ ಡೈವೋರ್ಸ್ ಪಡೆಯುವಲ್ಲೂ ಸಫಲವಾದಳು. ಹೆತ್ತ ತಂದೆ- ತಾಯಿಯ ಒಬ್ಬಳೇ ಮಗಳಾಗಿದ್ದುದರಿಂದ ಅವರ ಬಳಿಯೇ ಇದ್ದು ಅವರ ಸೇವೆ ಮಾಡುತ್ತಾ, ಕೆಲಸಕ್ಕೂ ಸೇರಿಕೊಂಡು ತನ್ನ ಜೀವನವನ್ನು ನೂಕುತ್ತಿದ್ದಳು. ಅವಳ ಈ ವಿಚಿತ್ರವಾದ ಕಥೆಯನ್ನು ಕೇಳಿ ಶ್ರೀ ಅವಳನ್ನು ಬಹಳವಾಗಿ ಸಂತೈಸಿದ. ಹಾಗೆಯೇ ತನ್ನ ಬದುಕಿನ ದಾರುಣ ಕತೆಯನ್ನು ಅವಳ ಮುಂದಿಡುತ್ತಿದ್ದ.

ನೀಲಿಮಾಳನ್ನು ಪ್ರೀತಿಸಿ ಮದುವೆಯಾಗಿದ್ದ ಶ್ರೀ. ಆತನಿಗೆ ತಕ್ಕಂತೆಯೇ ಸುರಸುಂದರಿ ನೀಲಿಮಾ. ಮದುವೆಯಾಗಿ ಆಕೆಯನ್ನು ಬಿಟ್ಟು ಹೊರದೇಶಕ್ಕೆ ಹೋಗಲು ಮನಸ್ಸಿಲ್ಲದಿದ್ದರೂ ಹೊಟ್ಟೆಯ ಪಾಡಿಗಾಗಿ ಆತನಿಗೆ ಹೊರ ದೇಶಕ್ಕೆ ಹೋಗಲೇಬೇಕಿತ್ತು. ಆಕೆಗೆ ಸಂತೈಸಿ ಅಬುಧಾಬಿಗೆ ತೆರಳಿದ ಶ್ರೀ. ಮೊದ ಮೊದಲು ಆತನ ಭಾವನೆಗೆ, ಪ್ರೀತಿಯ ಮಾತುಗಳಿಗೆ ಸ್ಪಂದಿಸುತ್ತಿದ್ದ ನೀಲಿಮಾ ಕ್ರಮೇಣ ಶ್ರೀಯೊಂದಿಗೆ ನೀರಸವಾಗಿ ಮಾತಾಡುತ್ತಿದ್ದಳು. ಯಾಕೆ ದಿನಾಲೂ ಫೋನ್

✍ ಶಾರದಾ ಎ. ಅಂಚನ್, ಕಲಂಬೋಲಿ

ಮಾಡುತ್ತೀರಿ ಎನ್ನುವಂತಿತ್ತು ಆಕೆಯ ಮಾತಿನ ಧೋರಣೆ. ಶ್ರೀಗೆ ಅವಳಲ್ಲಾದ ಬದಲಾವಣೆ ಅವಳ ಮಾತಿನಿಂದಲೇ ಅರ್ಥವಾಗುತ್ತಿತ್ತು. ಕೊನೆಗೂ ಆಕೆಯ ವರ್ತನೆಗೆ ಏನು ಕಾರಣ ಎಂದು ತಿಳಿಯಲು ತನ್ನ ಸಂಬಂಧಿಗಳಿಗೆ ಹೇಳಿದಾಗ ವಾಸ್ತವ ಏನೆಂದು ತಿಳಿದು ಬಂದಿತ್ತು ಶ್ರೀಗೆ. ಅವನ ಪ್ರೀತಿಯ ನೀಲಿಮಾ ಆತನಿಂದ ಸಿಗಲಾರದ ಸುಖವನ್ನು ಆಕೆಯ ಬಾಸ್‌ನ ಬಾಹುವಿನಲ್ಲಿ ಪಡೆಯುತ್ತಿದ್ದಳು. ಆದರೆ ನೀಲಿಮಾಳಿಗೆ ತನ್ನ ತಪ್ಪಿನ ಅರಿವಾದದ್ದು ಆಕೆಯ ಬಾಸ್ ಆಕೆಯ ಕಣ್ಣ ಮುಂದೆಯೇ ಸಹೋದ್ಯೋಗಿ ಕುಮುದಾಳೊಂದಿಗೆ ಕೂಡಾ ಸಲ್ಲಾಪದಲ್ಲಿ ತೊಡಗಿದಾಗ. ಆಕೆ ತನ್ನನ್ನು ತಾನು ಸುಧಾರಿಸಿಕೊಳ್ಳಬೇಕು ಎಂದು ಎಣಿಸಿಕೊಂಡಾದ ಸಮಯ ಮೀರಿ ಹೋಗಿತ್ತು. ಶ್ರೀ ಡೈವೋರ್ಸ್‌ಗೆ ಒತ್ತಾಯ ಮಾಡಿದ್ದ. ತನ್ನ ಪ್ರೀತಿಸಿ ಮದುವೆಯಾದ ಶ್ರೀಗೆ ದ್ರೋಹ ಮಾಡಿದ ತಪ್ಪಿನಿಂದ ಕುಬ್ಜಳಾಗಿ ಆತನ ದೃಷ್ಟಿಯಲ್ಲೂ ನೀಚಳಾಗಿ ಹೋದ ನೀಲಿಮಾಳಿಗೆ ಬದುಕು ಬೇಡವೆಂದೆನಿಸಿ ಶ್ರೀ ಬರಲು ಒಂದು ವಾರವಿರುವಾಗಲೇ ನಿದ್ದೆ ಗುಳಿಗೆಗಳನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಳು. ಅಂದಿನಿಂದ ಏಕಾಂಗಿಯಾಗಿದ್ದ ಶ್ರೀ ಫೇಸ್‌ಬುಕ್‌ನಲ್ಲಿ ಹಲವಾರು ಗೆಳೆಯರನ್ನು ಸಂಪಾದಿಸಿ ಅವರೊಂದಿಗೆ ತನ್ನ ದುಃಖವನ್ನು ಮರೆಯುತ್ತಿದ್ದ. ಹೀಗೆ ಫೇಸ್‌ಬುಕ್‌ನಲ್ಲಿ Search ಮಾಡುತ್ತಿದ್ದಾಗ ಕಂಡದ್ದು ದೀಪಾಳ ಮುಗ್ಧ ಮುಖ. ಮೊದಲ ನೋಟದಲ್ಲೇ ಆಕೆಗೆ ಮರುಳಾಗಿದ್ದ ಶ್ರೀ. ಆಕೆ ತನಗಿಂತಲೂ ದೊಡ್ಡವಳೆಂದು ಆಕೆಯ ಮಾಹಿತಿಗಳಿಂದ ತಿಳಿದು ಬಂದರೂ ಏನೂ ಅನ್ನಿಸಲಿಲ್ಲ ಶ್ರೀಗೆ. ಆತನಿಗೆ ಕಂಡದ್ದು ದೀಪಾಳ ಅಪೂರ್ವ ಸೌಂದರ್ಯ ಮಾತ್ರ. ಹೇಗಾದರೂ ಮಾಡಿ ಈಕೆಯ ಗೆಳೆತನ ಸಂಪಾದಿಸಬೇಕೆಂದು ನಿರ್ಧರಿಸಿದ್ದ ಶ್ರೀ ದೀಪಾ ಕೂಡಾ ಶ್ರೀಯ ರೂಪಕ್ಕೆ ಮರುಳಾಗಿದ್ದಳು. ಈತನ ಭಾವನೆಗಳಿಗೆ ಸ್ಪಂದಿಸತೊಡಗಿದ್ದಳು. ಸ್ನೇಹ ಪ್ರೇಮಕ್ಕೆ ತಿರುಗಿತ್ತು. ಪರಿಚಯವಾದ ಕೆಲವು ದಿನಗಳಲ್ಲಿಯೇ ಇವರಿಬ್ಬರ ಪ್ರೀತಿ ಗಾಢವಾಗಿ ಹೋಗಿತ್ತು. ಜೀವನ ಪೂರ್ತಿ

ಒಂದಾಗಿ ಇರುವ ನಿರ್ಧಾರವನ್ನು ಕೂಡಾ ಮಾಡಿದ್ದರು.

ಶ್ರೀ ಮತ್ತು ದೀಪಾಳದ್ದು ಒಂದೇ ರೀತಿಯ ನೋವಿನ ಕಥೆಯಾದ್ದರಿಂದ ಇಬ್ಬರೂ ಬಹಳಷ್ಟು ಭಾವುಕರಾಗಿ ಹೋಗಿದ್ದರು. ಈ ನಡುವೆ ಶ್ರೀ ದೀಪಾಳಿಗೆ ಆಘಾತವನ್ನಿತ್ತ. ಶ್ರೀ ಊರಿಗೆ ಬಂದವನೇ ಶಬರಿಮಲೆಯ ಯಾತ್ರೆ ಕೈಗೊಳ್ಳುವವನಿದ್ದ. ಅದಕ್ಕಾಗಿ 40 ದಿನಗಳ ಕಠಿಣ ಉಪವಾಸ, ಸ್ತ್ರೀಯರನ್ನು ನೋಡಬಾರದು, ಮಾತಾಡಬಾರದು ಎಂಬ ಕಠಿಣ ನಿಯಮಗಳಿರುವುದರಿಂದ ದೀಪಾಳಿಗೆ ತಿಳಿಸಿದ. "ಇನ್ನು ಒಂದೂವರೆ ತಿಂಗಳು ನಾನು ನಿನ್ನೊಂದಿಗೆ ಮಾತಾಡುವುದಾಗಲೀ, online ನಲ್ಲಿ chating ಮಾಡುವುದಾಗಲೀ ಏನೂ ಇಲ್ಲ. ಇನ್ನು ಎರಡು ದಿನಗಳ ನಂತರ ನಾನು ವ್ರತ ಕೈಗೊಳ್ಳುತ್ತೇನೆ. ಶಬರಿಮಲೆಯ ಯಾತ್ರೆ ಮುಗಿಸಿ ಬಂದ ನಂತರವೇ ನಾನು ನಿನಗೆ phone ಮಾಡಿ ಮನೆಗೆ ಬರುತ್ತೇನೆ" ಎಂದಾಗ ದೀಪಾ ಮೆಲ್ಲನೆ ತಲ್ಲಣಿಸಿದ್ದಳು. ಒಂದೂವರೆ ತಿಂಗಳು ಶ್ರೀಯೋಂದಿಗೆ ಮಾತಾಡದೆ ಅವನ E-mail ಇಲ್ಲದೆ ಹೇಗೆ ಇಡುವುದು ಎಂದು ಅವಳಿಗೆ ಅರ್ಥವಾಗಲಿಲ್ಲ. ಮನಸ್ಸು ನೋವಿನಿಂದ ತತ್ತರಿಸಿತು. ಕಣ್ಣಾಲಿಗಳು ತುಂಬಿ ಬಂದವು. ಆದರೂ ಆತನ ಧಾರ್ಮಿಕ ಭಕ್ತಿಗೆ ಅಡ್ಡಿಬರಬಾರದು ಎನ್ನುವ ಉದ್ದೇಶದಿಂದ ತನ್ನ ದುಃಖವನ್ನು ಅದುಮಿಟ್ಟುಕೊಂಡಳು. ಕೊನೆಯ ಎರಡು ದಿನಗಳಲ್ಲಿ ಪ್ರೇಮಿಗಳಿಬ್ಬರೂ ಎಷ್ಟು ಬೇಕೋ ಅಷ್ಟು ಮಾತಾಡಿದರು. ಶ್ರೀ ನಾನಾ ತರವಾಗಿ ಅವಳನ್ನು ಸಂತೈಸಿ ಊರಿಗೆ ಬಂದ ನಂತರ ಆಕೆಯನ್ನು ಮದುವೆಯಾಗುವ ಭರವಸೆಯಿತ್ತ. ದೀಪಾ ಆತನ ಪವಿತ್ರ ಶಬರಿಮಲೆಯ ಯಾತ್ರೆಗೆ ಶುಭ ಕೋರುತ್ತಾ ದುಃಖವನ್ನು ಅದುಮುತ್ತಾ ಫೋನನ್ನು ಕೆಳಗಿಟ್ಟಿದ್ದಳು. ಶ್ರೀಯೂ ನೋವಿನಿಂದಲೇ ಆಕೆಯೊಂದಿಗೆ ಮಾತಿಗೆ ವಿದಾಯಗೈದಿದ್ದ.


ಶ್ರೀಯೊಂದಿಗೆ ಮಾತುಕತೆ E-mail ಎಲ್ಲಾ ನಿಂತಾಗ ದೀಪಾ ವಿಪರೀತ ಮಂಕಾದಳು. ಫೇಸ್‌ಬುಕ್‌ನಲ್ಲಿರುವ ಅವನ ಫೋಟೋವನ್ನು ನೋಡಿ ಶ್ರೀ.... ಎಂದು ಅಳುತ್ತಿದ್ದಳು. ಅವನ ಸ್ವರ ಕಿವಿಗೆ ಕೇಳಿಸದೆ ಅಧೀರಳಾಗುತ್ತಿದ್ದಳು. ಕುಳಿತಲ್ಲಿ ನಿಂತಲ್ಲಿ ಆತನದೇ ಯೋಚನೆ. ಕಿರಿಕಿರಿಯಾಗಿ ಶ್ರೀಯಾಳ ಮನಸ್ಸಿನ ಹತೋಟಿಯೇ ತಪ್ಪಿತ್ತು. ಇದುವರೆಗೆ ಒಮ್ಮೆಯೂ ನೋಡದ ವ್ಯಕ್ತಿಗಾಗಿ ತಾನು ಇಷ್ಟೊಂದು ಚಡಪಡಿಸುತ್ತಿದ್ದೇನೆಯೇ ಎಂದು ಅವಳಿಗೇ ಅಚ್ಚರಿಯಾಗುತ್ತಿತ್ತು. ಪ್ರೀತಿ ಹೃದಯದಿಂದಲೇ ಹುಟ್ಟಿ ಬರುವುದು ಎಂದು, ದೀಪಾ ಚೆನ್ನಾಗಿ ತಿಳಿದುಕೊಂಡಳು. ದಿನೇ ದಿನೇ ಅವನ ನೆನಪಿನಲ್ಲಿ ಕೊರಗುತ್ತಿದಳು. ಶ್ರೀಯ ಮಾತಿನ ವೈಖರಿ, ಆತ ಕೊಟ್ಟ ಪ್ರಮಾಣ, ಆತ ತನ್ನನ್ನು ಗೌರವಿಸುವ ಪರಿ, ಇವೆಲ್ಲವುಗಳಿಂದ ಆತನ ವ್ಯಕ್ತಿತ್ವದ ಕಲ್ಪನೆ ಮಾಡಿಕೊಂಡ ದೀಪಾ ಆತನಿಗಾಗಿ ದಿನೇ ದಿನೇ ಹಂಬಲಿಸುತ್ತಿದ್ದಳು. ಆತನೊಂದಿಗೆ ಮಾತಾಡಲು, ಆತನನ್ನು ನೋಡಲು ಆಕೆಯ ಮನಸ್ಸು ಚಡಪಡಿಸುತ್ತಿತ್ತು. ತನ್ನನ್ನು ಬಾಳ ಸಂಗಾತಿಯನ್ನಾಗಿ ಆರಿಸಿಕೊಳ್ಳಲು ಮುಂದೆ ಬಂದ ಶ್ರೀಯ ಬಗ್ಗೆ ಆಕೆಗೆ ವಿಪರೀತ ಗೌರವವಿತ್ತು. ಒಂದೊಂದು ದಿನವೂ ಒಂದೊಂದು ವರ್ಷವಾಗಿ ಪರಿಣಮಿಸಿತ್ತು ಆಕೆಗೆ. ಹೀಗೆ ಕೊರಗಿ ಕೊರಗಿ ಆಕೆಯ ಆರೋಗ್ಯವೂ ಹದಗೆಡುತ್ತಿತ್ತು. ಆಕೆಯ ಸೌಂದರ್ಯವೂ ಕಳೆಗುಂದುತ್ತಿತ್ತು. ಶ್ರೀಯೂ ದೀಪಾಳನ್ನು ಮಾನಸಿಕವಾಗಿ ಮದುವೆಯಾಗಿದ್ದ. ನಾನು ಬರುವವರೆಗೂ ಜಾಗೃತೆಯಾಗಿರು ಎಂದು ಸಂತೈಸಿದ್ದ. ಆತನಿಗೂ ಮನಸ್ಸನ್ನು ಎಷ್ಟು ಹತೋಟಿಯಲ್ಲಿಟ್ಟುಕೊಂಡರೂ ದೀಪಾಳ ನೆನಪು ಮಾತ್ರ ಸದಾ ಕಾಡುತ್ತಿತ್ತು. ಆಕೆಯೊಂದಿಗೆ ಮಾತಾಡಬೇಕು ಎಂದಾಗುತ್ತಿತ್ತು. ಆದರೂ ಶ್ರೀ ಅಯ್ಯಪ್ಪನ ಹೆಸರನ್ನು ಕರೆಯುತ್ತಾ, ತನ್ನ ಮನಸ್ಸನ್ನು ಸ್ಥಿಮಿತದಲ್ಲಿಡಲು ಪ್ರಯತ್ನಿಸುತ್ತಿದ್ದ. ದೀಪಾ ಎಂದೆಂದೂ ತನ್ನವಳಾಗಿಯೇ ಇರುತ್ತಾಳೆ ಎಂದು ದೇವರ ಮೇಲೆ ಭಾರ ಹಾಕಿ ದಿನ ಕಳೆಯುತ್ತಿದ್ದ.

ದೀಪಾಳ ದಿನಗಳು ಚಿಂತೆ ಯಾತನೆಯಲ್ಲೇ ಕಳೆಯುತ್ತಿದ್ದವು. ಹೇಗೂ ಒಂದು ತಿಂಗಳು ಮುಗಿಯಿತು. ಇನ್ನು ಹತ್ತು ಹದಿನೈದು ದಿನಗಳಲ್ಲಿ ಶ್ರೀಯನ್ನು ತಾನು ನೋಡುತ್ತೇನೆ ಎಂದು ಸ್ವಲ್ಪ ಗೆಲುವಾಗಿರಲು ಪ್ರಯತ್ನಿಸುತ್ತಿದ್ದಳು. ಶ್ರೀ ದೀಪಾಳ ವಿಳಾಸ ತೆಗೆದುಕೊಂಡಿದ್ದ. ಜನವರಿ ನಾಲ್ಕು ತಾರೀಕಿಗೆ ದೀಪಾಳಿಗೆ ಸಿಗಲು ಬರುತ್ತೇನೆ ಎಂದಿದ್ದ.

ಅಂದು ಜನವರಿ 2 ತಾರೀಕು. ಇನ್ನೆರಡು ದಿನದಲ್ಲಿ ಶ್ರೀಯನ್ನು ತಾನು ಕಣ್ತುಂಬ ನೋಡುತ್ತೇನೆ ಎಂದು ದೀಪಾ ಸಂತೋಷದಿಂದ ತನ್ನನ್ನು ತಾನು ಸುಂದರವಾಗಿ ಕಾಣಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ಅಂದು ಆಫೀಸಿನಿಂದ ಬಂದವಳೇ ಸುಸ್ತಾಗಿ ಸ್ವಲ್ಪ ಹೊತ್ತು ಸೋಫಾದಲ್ಲಿ ಒರಗಿದ್ದಳು. ಅಲ್ಲಿಯೇ ಮೆಲ್ಲನೆ ಜೋಂಪು ಹತ್ತಿತ್ತು ಅವಳಿಗೆ. ದೀಪಾಳ ತಂದೆ ಟಿ.ವಿ.ಯಲ್ಲಿ ನ್ಯೂಸ್ ನೋಡುತ್ತಿದ್ದರು. ಕೇರಳದಲ್ಲಿ ವಿಮಾನ ದುರಂತ ಎಂಬ ನ್ಯೂಸ್ ನಿದ್ದೆಯಲ್ಲಿದ್ದ ದೀಪಾಳನ್ನು ಥಟ್ಟನೆ ಎಚ್ಚರಿಸಿತು. ದೀಪಾ ಕಣ್ಣುಜ್ಜಿಕೊಂಡು ನ್ಯೂಸ್ ಕೇಳತೊಡಗುತ್ತಾಳೆ. ಮುಂಬಯಿಯಿಂದ ಕೇರಳಕ್ಕೆ ತೆರಳುತ್ತಿದ್ದ ವಿಮಾನ ತಾಂತ್ರಿಕ ಕಾರಣಗಳಿಂದ ನೆಲಕ್ಕಪ್ಪಳಿಸಿ ಸಾವನ್ನಪ್ಪಿದವರ ಹೆಸರನ್ನು ಓದಿ ಹೇಳುತ್ತಿದ್ದರು. ದೀಪಾ ಭಯಭೀತಳಾಗಿ ಹೆಸರನ್ನು ಕೇಳುತ್ತಿದ್ದಳು. ಅಜಿತ್, ಸುಂದರ್, ಅಮಿತ್, ಶ್ರೀ ಕುಮಾರ್.... ಹೀಗೆ ಹೆಸರಿನ ಪಟ್ಟಿ ಬೆಳೆಯುತ್ತಲೇ ಇತ್ತು. ಶ್ರೀ ಕುಮಾರ್ ಹೆಸರು ಕೇಳುತ್ತಿದ್ದಂತೆಯೇ ದೀಪಾಳ ಹೃದಯದ ಬಡಿತ ಹೆಚ್ಚಾಯಿತು. ಕಣ್ಣು ಗುಡ್ಡೆಗಳು ಭಯದಿಂದ ವಿಹ್ವಲಗೊಂಡವು. ರಕ್ತ ಚಾರ ನಿಂತಂತಾಯಿತು. ಹೌದು ! ಶ್ರೀ ಕೂಡಾ ಹೇಳಿದ್ದ. 2 ತಾರೀಕಿಗೆ ಮುಂಬಯಿಯಿಂದ ಕೇರಳಕ್ಕೆ ಅಯ್ಯಪ್ಪನ ದರ್ಶನಕ್ಕೆ ವಿಮಾನದಲ್ಲಿ ಹೋಗುವೆನೆಂದು ! ಹಾಗಾದರೆ ಶ್ರೀ ವಿಮಾನ ದುರಂತದಲ್ಲಿ ಸತ್ತನೇ.... ದೀಪಾ "ಶ್ರೀ...." ಎಂದು ಚೀರುತ್ತಾ, ತೀವ್ರ ಎದೆ ನೋವಿನಿಂದ ಬೊಬ್ಬಿಡುತ್ತಾ ಅಲ್ಲೇ ಕುಸಿದಳು.

ದೀಪಾಳಿಗೆ ಮಾನಸಿಕ ಒತ್ತಡದ, ಆಘಾತದ ಪರಿಣಾಮವಾಗಿ ಲಘು ಹೃದಯಾಘಾತವಾಗಿತ್ತು. 3-4 ದಿನಗಳ ನಂತರ ನಿಧಾನವಾಗಿ ಚೇತರಿಸಿಕೊಂಡಳು. ICU ನಿಂದ ವಾರ್ಡಿಗೆ ಶಿಫ್ಟ್ ಮಾಡಿದ್ದರು ದೀಪಾಳನ್ನು. ಆಕೆ ಸ್ವಲ್ಪ ಸ್ವಲ್ಪವೇ ಮಾತನಾಡಲಾರಂಭಿಸಿದಾಗ ಆಕೆಯ ತಾಯಿ ಆಕೆಯ ತಲೆ ನೇವರಿಸುತ್ತಾ, "ದೀಪಾ ಎಲ್ಲಾ ವಿಷಯ ತಿಳಿದುಕೊಳ್ಳದೆ ಯಾಕಮ್ಮಾ ಇಷ್ಟೊಂದು ಆಘಾತಕ್ಕೊಳಗಾದೆ ? ಅಂದು ನೀನು ಶ್ರೀ ಕುಮಾರ್ ಹೆಸರು ಕೇಳುತ್ತಲೇ ಶ್ರೀ.... ಎಂದು ಚೀರುತ್ತಾ ಕುಸಿದೆ. ಆದರೆ ನೀನು ಯಾವ ಶ್ರೀ ಎಂದು ಎಣಿಸಿದ್ದೆಯೋ ಆ ಶ್ರೀ ಅವನಾಗಿರಲಿಲ್ಲ. ಆತ ಬೇರೆ ಶ್ರೀ ಕುಮಾರ್ ಆಗಿದ್ದ. ನಿನ್ನ ಶ್ರೀ ನಿನ್ನೆಯಷ್ಟೇ ಬಂದಿದ್ದಾನೆ. ಆತ ಎಲ್ಲಾ ವಿಷಯ ತಿಳಿಸಿದ್ದಾನೆ. ಬಂದಂದಿನಿಂದ ಒಂದು ತೊಟ್ಟು ನೀರೂ ಕೂಡಾ ಕುಡಿದಿಲ್ಲ ಆತ. ನಿನ್ನ ಆರೋಗ್ಯಕ್ಕಾಗಿ ಪ್ರಾರ್ಥಿಸುತ್ತಾ ಇದ್ದಾನೆ. ಈಗ ಕೆಳಗೆ ಮೆಡಿಸಿನ್ ತರಲು ಹೋಗಿದ್ದಾನೆ. ಇನ್ನೇನು ಬರಬಹುದು" ಎನ್ನುವಷ್ಟರಲ್ಲಿಯೇ ಶ್ರೀ ಅಲ್ಲಿಗೆ ಬರುತ್ತಾನೆ. ದೀಪಾಳ ತಾಯಿ, "ನೋಡು ಮಗಾ, ಇವನೇ ಶ್ರೀ ಎಂದಾಗ ದೀಪಾ ಅವನತ್ತ ನೋಡುತ್ತಾಳೆ. ಅವನನ್ನು ನೋಡ ನೋಡುತ್ತಾ ಗದ್ಗಿತಳಾಗುತ್ತಾಳೆ. ಹೌದು ! ಇವನೇ ನನ್ನ ಶ್ರೀ, ಅದೇ ನಗುಮುಖ; ದಿನಾಲೂ face book ನಲ್ಲಿ ಕಂಡು ಕಣ್ಣಲ್ಲಿ ತುಂಬಿಕೊಳ್ಳುತ್ತಿದ್ದ ಶ್ರೀ ಇವನೇ. ದೀಪಾಳಿಗೆ ಆನಂದ, ದುಃಖ ಎರಡೂ ಒಟ್ಟಿಗೇ ಆಯಿತು. ಶ್ರೀಯೆಡೆಗೆ ಕೈಚಾಚುತ್ತಾಳೆ. ಶ್ರೀ ದೀಪಾಳ ಬಳಿ ಬರುತ್ತಾನೆ. ಶ್ರೀಯನ್ನು ತಬ್ಬಿಕೊಂಡು ಜೋರಾಗಿ ಅತ್ತಳು ದೀಪಾ. ಅಳು ಕಡಿಮೆಯಾಗದಂತೆ ಮೆಲ್ಲನೆ ಹೇಳಿದಳು. "ಅದೇನು, ವಿಮಾನ ದುರಂತ, ನಿನ್ನ ಹೆಸರನ್ನು ಸತ್ತವರ ಪಟ್ಟಿಯಲ್ಲಿ ಕೇಳಿದೆ. ಹೆದರಿ ಈ ಸ್ಥಿತಿ" ಎಂದಾಗ ಶ್ರೀ "ಹೌದು, ನಮ್ಮಿಬ್ಬರ ಅದೃಷ್ಟ ಚೆನ್ನಾಗಿತ್ತು. ಆ ಅಯ್ಯಪ್ಪ ಸ್ವಾಮಿ ನನ್ನನ್ನು ರಕ್ಷಿಸಿದ. ಅದೇ ವಿಮಾನದಲ್ಲಿ ತಾನು ಕೇರಳಕ್ಕೆ ಹೋಗುವವನಿದ್ದೆ. ಆದರೆ ಅಬುಧಾಬಿಯ ನನ್ನ ಪ್ಲೇನ್ ಕ್ಯಾನ್ಸಲ್ ಆಗಿ ಬರುವಾಗ ಒಂದು ದಿನ ಲೇಟಾಯಿತು. ಹಾಗಾಗಿ ನನಗೆ ಕೇರಳದ ಪ್ಲೈನ್ ಟಿಕೆಟ್ ಸಿಗಲಿಲ್ಲ. ಅನಿವಾರ್ಯವಾಗಿ ಬಸ್ಸಿನಲ್ಲಿ ಪ್ರಯಾಣಿಸಬೇಕಾಯಿತು. ದೇವರಿಗೂ ನಾನು ವಿಮಾನದಲ್ಲಿ ಅವನ ಸನ್ನಿಧಿಗೆ ಹೋಗುವುದು ಇಷ್ಟವಿರಲಿಲ್ಲವೋ ಏನೋ? ಅಲ್ಲದೆ ನಿನ್ನ ಪ್ರೀತಿಯೂ ನನ್ನ ಆಯುಷ್ಯ ಹೆಚ್ಚಿಸಿತು. ಹೀಗಾಗಿ ನಾನು ನಿನಗೆ ಹೇಳಿದ ದಿನದಂದು ಬರಲಾಗಲಿಲ್ಲ" ಎಂದಾಗ ದೀಪಾ ಮತ್ತಷ್ಟು ಭಾವುಕಳಾಗಿ ಶ್ರೀಯನ್ನು ತಬ್ಬಿಕೊಂಡಳು. ಶ್ರೀ ಅವಳನ್ನು ಸಂತೈಸುತ್ತಲೇ ಇದ್ದ. ದೀರ್ಘ ಅಗಲಿಕೆಯ ಸುದೀರ್ಘ ನೋವನ್ನು ಹಂಚಿಕೊಳ್ಳುತ್ತಾ ನೊಂದ ಜೀವಗಳೆರಡು ಅಸ್ತಿತ್ವವನ್ನೇ ಮರೆತುಬಿಟ್ಟಿದ್ದರು. ಇನ್ನಾದರೂ ತಮ್ಮ ಮಗಳ ಬದುಕು ಹಸನಾಗಲೆಂದು ಹಾರೈಸುತ್ತಾ ದೀಪಾಳ ತಂದೆ ತಾಯಿ ಅವರಿಬ್ಬರನ್ನು ಅಲ್ಲೇ ಬಿಟ್ಟು ಹೊರ ನಡೆದರು.

# ಮುಂಬಯಿ ವಿ.ವಿ.ಕನ್ನಡ ವಿಭಾಗ: ಮಿತ್ರಾ ವೆಂಕಟ್ರಾಜ್ ಸಾಹಿತ್ಯ ಸಂಭ್ರಮ
## ವಾಸ್ತವವಾದದ ಅರಿವಿನಲ್ಲೇ ಮಿತ್ರಾರ ಕತೆಗಳಿವೆ: ಎಸ್. ಆರ್. ವಿಜಯಶಂಕರ್



ಮುಂಬಯಿ, – ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಇತ್ತೀಚೆಗೆ ವಿದ್ಯಾನಗರಿಯ ಜೆ.ಪಿ.ನಾಯಕ್ ಭವನ್ ಇಲ್ಲಿ ಹೆಸರಾಂತ ಸಾಹಿತಿ 'ಮಿತ್ರಾ ವೆಂಕಟ್ರಾಜ್ ಸಾಹಿತ್ಯ ಸಂಭ್ರಮ'ವನ್ನು ಹಮ್ಮಿಕೊಳ್ಳಲಾಯಿತು. ಮುಖ್ಯ ಅತಿಥಿಯಾಗಿ ಖ್ಯಾತ ವಿಮರ್ಶಕ ಎಸ್. ಆರ್. ವಿಜಯಶಂಕರ್ ಆಗಮಿಸಿದ್ದರು.

ವಾಸ್ತವವಾದದ ಅರಿವಿನಲ್ಲೇ ಮಿತ್ರಾ ವೆಂಕಟ್ರಾಜ್ ಅವರ ಕತೆಗಳು ಕಂಡುಬರುತ್ತವೆ ಎಂದು ಹೇಳಿದ ವಿಜಯಶಂಕರ್ ಅವರು, ಇಲ್ಲಿ ಮಾನವ ಸಂವೇದನೆಗಳಿವೆ. ಮಾಗುತ್ತಾ ಹೊಸದಾಗುವುದು ಮಿತ್ರಾರ ಕತೆಗಳ ಯಶಸ್ಸು. ಮಾಗುವ ಕಡೆಗೆ ವಾಲುವ ಕತೆಗಳು ಮಾತ್ರ ಬಹುಕಾಲ ಬದುಕುತ್ತವೆ. ಮಿತ್ರಾ ಅವರ ಕತೆಗಳಲ್ಲಿ ಬದುಕಿನ ಪ್ರೀತಿಯ ಅನ್ವೇಷಣೆ ಎದ್ದುಕಾಣುತ್ತದೆ. ಹಾಗಿದ್ದೂ ಓದುಗನಾಗಿ ಮಿತ್ರಾ ಅವರಲ್ಲಿ ನನ್ನ ಬೇಡಿಕೆ ಅಂದರೆ ವಿಶ್ವರೂಪದ ಡಾಟ್ಸ್ ಸಿಗುವ ಕೃತಿ ಅವರಿಂದ ಇನ್ನಷ್ಟು ಹೊರಬರಲಿ ಎಂದು ಆಶಿಸಿದರು.

ಅದೇ ಸಮಯದಲ್ಲಿ ಬಲ್ಲಾಳ–ಚಿತ್ತಾಲ–ಕಾಯ್ಕಿಣಿ ಅವರಂತೆ ಮುಂಬಯಿ ಪೆಟ್ಟಿಗೆಯಲ್ಲಿ ಕಾಣುವಂತೆ ಬರೆಯುವ ಕತೆಗಳು ನಮ್ಮ ವಿಮರ್ಶಕರನ್ನು ಸಾಮಾನ್ಯವಾಗಿ ಬೇಗನೆ ತಟ್ಟುವುದಿಲ್ಲ ಎಂದೂ ಹೇಳಲು ಮರೆಯಲಿಲ್ಲ. ಕೃತಿಯ ಜತೆಗಿನ ಅನುಸಂಧಾನದಲ್ಲಿ ಮುಂಬಯಿ ಅನುಭವ ನನಗೆ ಏನು? ಎಂದು ನನಗೆ ನಾನೇ ಅರ್ಥ ಮಾಡಿಕೊಳ್ಳುವ ಪ್ರಯತ್ನ ವಿಮರ್ಶೆ ಬರೆಯುವಾಗ ಎದುರಾಗುವುದು ಎಂಬತ್ತಲೂ ಅವರು ಬೆಳಕು ಚೆಲ್ಲಿದರು.

ಅಭಿನಂದನ ಗ್ರಂಥ 'ಮಿತ್ರಾವ ಳಿ'ಯನ್ನು ಬಿಡುಗಡೆಗೊಳಿಸಿದ ಖ್ಯಾತ ವಿಜ್ಞಾನಿ, ಸಾಹಿತಿ ಡಾ. ವ್ಯಾಸರಾವ್ ನಿಂಜೂರು ತಮ್ಮ ಅಭಿನಂದನಾ ಭಾಷಣದಲ್ಲಿ, ಮಿತ್ರಾ ಅವರು ಸಾಂಸ್ಕೃತಿಕ ಮತ್ತು ಶ್ರೀಮಂತ ಕುಟುಂಬದಿಂದ ಬಂದವರು. ಮಿತ್ರರಷ್ಟು ಹೆಣ್ಣಿನ ಒಳನೋಟವನ್ನು ಕತೆಗಳಲ್ಲಿ ಚಿತ್ರಿಸುವವರು ಬಹುಅಪರೂಪ ಎಂದರಲ್ಲದೆ ನಮ್ಮಲ್ಲಿಂದು ಸ್ತ್ರೀ ಸಂವೇದನೆ, ದಲಿತ ಸಂವೇದನೆ, ಮುಸ್ಲಿಂ ಸಂವೇದನೆ ಇತ್ಯಾದಿಗಳ ಚರ್ಚೆ ಆಗುತ್ತಿದೆ. ಆದರೆ ಕೊರಡ್ಕಲ್ ಶ್ರೀನಿವಾಸರಾವ್ ಅವರ ಧನಿಯರ ಸತ್ಯನಾರಾಯಣ ಕತೆ, ಕಾರಂತರ ಚೋಮನದುಡಿ ಕತೆ ಇವೆಲ್ಲ ದಲಿತ ಬದುಕಿನ ಪ್ರಭಾವ ಶಾಲಿ ಕತೆಗಳು. ಇವನ್ನೆಲ್ಲ ಅನೇಕ ದಶಕಗಳ ಹಿಂದೆಯೇ ಬರೆಯಲಾಗಿದೆ ಎಂದು ಗಮನಿಸಿದರು.

ಮುಂಬಯಿ ವಿ. ವಿ. ಕನ್ನಡ ವಿಭಾಗದ ಮುಖ್ಯಸ್ಥ ಹಾಗೂ ಮಿತ್ರಾ ವೆಂಕಟ್ರಾಜ್ ಅಭಿನಂದನ ಗ್ರಂಥ 'ಮಿತ್ರಾವಳಿ'ಯ ಸಂಪಾದಕ ಡಾ. ಜಿ. ಎನ್. ಉಪಾಧ್ಯ ಅವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ವಿಭಾಗ ಮಾಸ್ತಿ, ಕುವೆಂಪು, ತೇಜಸ್ವಿ, ಸನದಿ, ನಾಡಕರ್ಣಿ, ಕುರ್ಕಾಲ್ ಮೊದಲಾದ ಹಿರಿಯ ಸಾಹಿತಿಗಳ ಕುರಿತು ವಿಚಾರ ಸಂಕಿರಣವನ್ನು ಈ ಹಿಂದೆ ಆಯೋಜಿಸಿದ್ದು, ಈ ಸಾಲಿಗೆ ಈಗ ಮಿತ್ರಾ ಅವರ ಹೆಸರು ಸೇರ್ಪಡೆಯಾಗಿದೆ. ಮಹಿಳಾ ಸಾಹಿತ್ಯದ ಗಟ್ಟಿದನಿ ಮಿತ್ರಾ ವೆಂಕಟ್ರಾಜ್. ಅವರ ಸಮಗ್ರ ಸಾಹಿತ್ಯದ ವಿಶ್ಲೇಷಣೆ ಈ ಕೃತಿಯಲ್ಲಿ ದಾಖಲಾಗಿದೆ. ಮಿತ್ರಾ ವೆಂಕಟ್ರಾಜ್‌ರ ಸಾಹಿತ್ಯ ಸ್ಪಂದನವೂ ಇದಾಗಿದೆ ಎಂದು ನುಡಿದರು.

ಸಾಹಿತ್ಯ ಬಳಗದ ಅಧ್ಯಕ್ಷ ಎಚ್.ಬಿ.ಎಲ್.ರಾವ್ ಸ್ವಾಗತ ನುಡಿಗಳನ್ನಾಡಿದರು. ಅಭಿನಂದನ ಗ್ರಂಥದ ಹೆಸರು 'ಮಿತ್ರಾವಳಿ' ಎಲ್ಲರನ್ನು ಮಿತ್ರರಂತೆ ನೋಡುವ ವಿಶಾಲ ಮನೋಭಾವ ಇಲ್ಲಿದೆ. ಮಿತ್ರಾರು ಪ್ರಚಾರ ಬಯಸದ ಸಾಹಿತಿ, ಸಾಧಕಿ. ನವರಾತ್ರಿಯ ಪರ್ವಕಾಲದಲ್ಲಿ ಸಾಂಕೇತಿಕವಾಗಿ ಇದು ಬಿಡುಗಡೆಗೊಂಡಿದ್ದರೂ ಇಂದು ಅಧಿಕೃತ ರೂಪದಲ್ಲಿ ವಿ.ವಿ.ಕನ್ನಡ ವಿಭಾಗದಲ್ಲಿ ಬಿಡುಗಡೆ ಗೊಂಡಿರುವುದು ಸಂತೋಷವಾಗಿದೆ ಎಂದರು.

ತನ್ನ ಸಾಹಿತ್ಯ ಬದುಕು ಬೆಳೆದು ಬಂದ ಬಗೆಯನ್ನು ಈ ಸಂದರ್ಭದಲ್ಲಿ ಮಿತ್ರಾ ವೆಂಕಟ್ರಾಜ್ ಅವರು ಸಭೆಯ ಮುಂದೆ ತೆರೆದಿಟ್ಟರು. ತನ್ನ ಪತಿ ವೆಂಕಟ್ರಾಜ್‌ರು ನೀಡಿದ ಪ್ರೋತ್ಸಾಹವನ್ನು ಅವರಿಲ್ಲಿ ಸ್ಮರಿಸಿದರು.

'ಮಿತ್ರಾವಳಿ' ಕೃತಿಯ ಕುರಿತು ರಂಗನಟಿ ಅಹಲ್ಯಾ ಬಲ್ಲಾಳ ಪರಿಚಯ ನುಡಿಗಳನ್ನಾಡಿ ಮಿತ್ರಾರ ವೈಶಿಷ್ಟ್ಯತೆ ತಿಳಿಸಿದರು.

ಮಿತ್ರಾ ವೆಂಕಟ್ರಾಜ್ ಅವರೊಂದಿಗೆ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಪೂರ್ಣಿಮಾ ಎಸ್. ಶೆಟ್ಟಿ ಮತ್ತು ಸಂಶೋಧನಾ ಸಹಾಯಕರಾದ ರಮಾ ಉಡುಪ ಸಂವಾದ ನಡೆಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿಗಳಾದ ಡಾ.ಜೀವಿ ಕುಲಕರ್ಣಿ, ಬಿ.ಎಸ್. ಕುರ್ಕಾಲ್, ರತ್ನಾಕರ ಶೆಟ್ಟಿ, ಡಾ. ಸುನೀತಾ ಶೆಟ್ಟಿ, ವಿಶ್ವನಾಥ್ ಕಾರ್ನಾಡ್, ಶ್ರೀನಿವಾಸ ಜೋಕಟ್ಟೆ, ಡಾ.ಕೆ.ರಘುನಾಥ್, ಡಾ. ಗಿರಿಜಾ ಶಾಸ್ತ್ರಿ, ಶ್ಯಾಮಲಾ ಮಾಧವ್, ಮೀನಾ ಕಾಳಾವರ್, ಕಟ್ಕೆರೆ ಸಂಜೀವ್ ಶೆಟ್ಟಿ, ವಸಂತ ಕಲಕೋಟಿ, ಡಾ.ಎಸ್.ಕೆ. ಭವಾನಿ, ದಾಕ್ಷಾಯಿಣಿ ಯಡಹಳ್ಳಿ, ವೆಂಕಟ್ರಾಜ್ ರಾವ್ ಮತ್ತು ಅವರ ಪರಿವಾರ ಮತ್ತಿತರ ತಾಹಿತ್ಯಾಭಿಮಾನಿಗಳು ಪಾಲ್ಗೊಂಡಿದ್ದರು.

ಶ್ಯಾಮಲಾ ಪ್ರಕಾಶ್ ಪ್ರಾರ್ಥನೆ ಹಾಡಿದರು. ಡಾ. ಪೂರ್ಣಿಮಾ ಶೆಟ್ಟಿ ವಂದಿಸಿದರು.

# ಕೊಡಲಿಲ್ವೇ _.. ! ಕೊಡಲಿಲ್ವೇ ! ?

ಏನು ಕೋಕಿಲಿಲ್ಯಾ ! ೦ಃ**ಯಾರು ಕೊಡ**ಲಿಲ್ಲಾ ? ಯಾತಕ್ಕೆ ಕೊಡಲಿಲ್ಲಾ ! ಏನೂ ಅರ್ಥವಾಗದೇ ! ಯಾರದೀ ಆಲಾಪ, ಪ್ರಲಾಪ, ಎಂದಿರಾ ಇದೆಲ್ಲಾ ನಮ್ಮವರದೇ, ನಮ್ಮ ಜನರದೇ, ಈ ಸಮಾಜದಲ್ಲಿರುವ ಹಲವರದೇ ಎಂದರೆ, ಉಹೂಂ, ಇದರಿಂದಲೂ ಏನೂ ಅರ್ಥವಾಗಲಿಲ್ಲಾ. ಎಲ್ಲಾ ಒಗಟು, ಗೊಂದಲಮಯವಾಗಿದೆ ಎನ್ನಬಹುದು ಕೆಲವು ಓದುಗರು. ಈ ವಿಷಯವನ್ನು ಇನ್ನೂ ಕಗ್ಗಂಟಾಗಿಸದೆ, ಹೇಳಬೇಕಾದ್ದನ್ನು ಸರಳವಾಗಿ, ನೇರವಾಗಿ ಹೇಳಿಯೇ ಬಿಡುತ್ತೇನೆ.

ಪ್ರತಿ ದಿನವೂ ನಿಮ್ಮ ವ್ಯಾಪಾರ, ವ್ಯವಹಾರ, ಕಸುಬಿನ ಸಂಬಂಧವಾಗಿ ನೀವು ಭೇಟಿ ಮಾಡುವ ಹಲವರ ಪೈಕಿ, ಕೆಲವರದು ಇದೇ ರಾಗವೇ, ಮುಲುಗಾಟವೇ. ಏನು ಸ್ವಾಮಿ ಚೆನ್ನಾಗಿದ್ದೀರಾ ! ಎಂದು ಲೋಕಾರೂಢಿಯಾಗಿ ಕೇಳಿದ್ದೇ ತಡ, ಏನು ಚಂದವೋ, ಚಾರವೋ, ಅದನ್ನೆಲ್ಲಾ ಹೇಳಿ ದುಃಖ ಹೆಚ್ಚು ಮಾಡಿಕೊಳ್ಳುವುದಕ್ಕಿಂತಾ, ಹೇಳದೇ ನಮ್ಮಲ್ಲೇ ಅದನ್ನು ಅದುಮಿಟ್ಟುಕೊಳ್ಳುವುದೇ ಒಳ್ಳೆಯದು, ಅಂತಾರೆ ಅವ್ರು. ಪಾಪ, ಏನಿರಬಹುದು ಇವರ ದುಃಖ, ಸಂಕಟ, ಎಂದು ಕನಿಕರಿಸಿ, ಮತ್ತೆ ಅವರನ್ನೇ ಪ್ರಶ್ನಿಸಿದರೆ, ಆಗ ಬಾಯಿ ಬಿಡ್ತಾರೆ. ನೋಡಿ, ಆ ದೇವರು ನನಗೆ ವಿದ್ಯೆ, ಬುದ್ಧಿ, ಎಲ್ಲಾ ಕೊಟ್ಟ, ಆದರೆ, ಸಂಪತ್ತನ್ನು ಮಾತ್ರ ನನಗೆ 'ಕೊಡಲಿಲ್ವೇ' ! ಎಂತೆಂತಹವರಿಗೆಲ್ಲಾ ಐಶ್ವರ್ಯ ಕೊಟ್ಟ ಆ ದೇವರು, ನನಗೆ ಮಾತ್ರ 'ಕೊಡಲಿಲ್ವೇ' ಎಂಬ ಸಂಕಟ ಇವರದು.

ಮತ್ತೆ ಕೆಲವರನ್ನು ಭೇಟಿ ಮಾಡಿದರೆ, ಅವರದು ಇನ್ನೊಂದು ರೀತಿಯ ದುಃಖ. ನೋಡಿ ಸರ್, ಮೂರು ತಲೆ ಮಾರು ಕುಳಿತು ತಿಂದರೂ ಸವೆಯದ ಸಂಪತ್ತು ನನಗಿದೆ. ಆದರೆ ಅದನ್ನು ವೃದ್ಧಿಸಿ, ರಕ್ಷಿಸಿಕೊಳ್ಳಲು ನನ್ನ ಮಕ್ಕಳಿಗೆ ವಿದ್ಯೆ ಬುದ್ಧಿಯನ್ನು ಆ ದೇವರು 'ಕೊಡಲಿಲ್ವೇ'! ಎಂದು ಆಕಾಶದ ಕಡೆ ನೋಡಿ, ನಿಟ್ಟುಸಿರಿಟ್ಟವರು, ಇವರು.

ಛೇ, ನನಗೆ ಸಿಕ್ಕಿದ ಈ ಇಬ್ಬರೂ ತನಗೆ ದೇವರು ಅದು ಕೊಡಲಿಲ್ಲಾ, ಇದು ಕೊಡಲಿಲ್ಲಾ ಎಂದು ಗೋಳಾಡಿದರಲ್ಲಾ, ಎಂದು ಬೇಸರಿಸಿಕೊಂಡು, ಮನೆಯ ಕಡೆ ಹೊರಟೆ. ಮಾರ್ಗ ಮಧ್ಯದಲ್ಲೇ ನನ್ನೊಬ್ಬ ಬಂಧು ಸಿಕ್ಕಿದ. ಕುಶಲೋಪರಿ ವಿಚಾರಿಸಿದಾಗ, ಆತನೆಂದ, ನೋಡಯ್ಯಾ, ನಿನಗೆ ತಿಳಿದಂತೆ ನಮ್ಮದು ಲಾಗಾಯ್ತಿನಿಂದ ಒಳ್ಳೆಯ ಸಂಪ್ರದಾಯಸ್ಥರ ಮನೆತನ. ಬೆಳಗ್ಗೆ ಎದ್ದ ಕೂಡಲೇ ಸ್ನಾನ, ಸಂಧ್ಯಾವಂದನೆ, ದೇವರ ಪೂಜೆ ಇಲ್ಲದೆ ಒಂದು ತೊಟ್ಟು ನೀರೂ ಬಾಯಿಗೆ ಹಾಕಿದವರಲ್ಲಾ. ಆದರೆ, ನಮ್ಮ ಪೂರ್ವ ಜನ್ಮದ ಪಾಪವೋ, ಯಾರ ಶಾಪವೋ, ನಮ್ಮ ದುರಾದೃಷ್ಟವೋ, ತಿಳಿಯದು. ಇವನೊಬ್ಬ ಕೆಟ್ಟ ಹುಳು ನಮ್ಮ ಹೊಟ್ಟೇಲಿ ಹುಟ್ಟಿದ್ದಾನೆ. ಆಚಾರ, ಸಂಪ್ರದಾಯ ಒಂದೂ ಇಲ್ಲಾ, ಈ ಮುಂಡೇದಕ್ಕೆ. ಹಾಸಿಗೆ ಮೇಲಿರುವಂತೇನೇ ಬೆಡ್ ಕಾಫಿ, ಮೈ ಮುರಿದು ಮೇಲೇದ್ದು, ನಾಲ್ಕು ಚೊಂಬು ಬಿಸಿ ನೀರು ಮೈ ಮೇಲೆ ಸುರಿದುಕೊಂಡು, ತಟ್ಟೆ ಮುಂದೆ ಕೂತ್ಕೊಳ್ತಾನೆ, ಇಬ್ಬರಿಗಾಗುವಷ್ಟು ಗಡದ್ದಾಗಿ ತಿಂದು ತೇಗಿ, ಊರು ಅಲೆಯೋಕೆ ಹೋಗ್ತಾನೆ. ಇವನಿಂದ ನಮ್ಮ ವಂಶದವರೆಲ್ಲಾ ನರಕಕ್ಕೆ ಹೋಗುವಂತಾಗಿದೆ. ಇವನಿಗೆ ಆ ದೇವರು ಒಳ್ಳೇ ಬುದ್ಧಿ 'ಕೊಡಲಿಲ್ವೇ' ! ಎಂದು ಹಣೆ ಚಚ್ಚಿಕೊಂಡ, ಆ ಹಿರಿಯ. ಇಷ್ಟು ಹೊತ್ತೂ ಆ ಜೀವ, ಯಾರ ಬಗ್ಗೆ ಪ್ರಲಾಪಿಸಿದ್ದು ಎಂಬುದು ತಿಳಿಯಲಿಲ್ವೇ ? ಅದೇ, ಅವರ ಏಕೈಕ ಪುತ್ರ ರತ್ನನದು ಎಂಬುದನ್ನು ವಿವರಿಸಬೇಕಿಲ್ಲಾ.

ಎಲ್ಲಿ ಹೋದರೂ ಅಲ್ಲೂ ಬಂದ್ಯಾ ಜಡೇ ರಂಗ ಎಂಬ ಗಾದೆಯಂತೆ, ನಾ ಹೋದ ಜಾಗದಲ್ಲೆಲ್ಲಾ ಇಂತಹವರೇ ಸಿಕ್ತಿದಾರಲ್ಲಾ ಇವತ್ತು , ನಾ ಎದ್ದ ಘಳಿಗೆಯೇ ಸರಿಯಿಲ್ವೇನೋ ಎಂದು ಪೇಚಾಡಿಕೊಳ್ಳುತ್ತಾ ಮನೆ ಕಡೆ ಹೊರಟೆ. ತಕ್ಷಣವೇ ಅಲ್ಲೂ ಎದುರಾದ, ನನ್ನ ಸಮೀಪ ಬಂಧುವೊಬ್ಬ. ಸಧ್ಯ, ಬೇಸರ ಕಳೆಯಲು ಇವನ ಹತ್ರ ಸ್ವಲ್ಪ ಕಾಲ ಹರಟಬಹುದು ಎಂದು ಮನ ಹಗುರ ಮಾಡಿಕೊಂಡೆ. ಏನು ಸಮಾಚಾರ, ಎಲ್ಲಾ ಆರಾಮಾನಾ, ಎಂದಿದ್ದೇ ತಡ, ಆತನೂ ಶುರು ಮಾಡಿದ ತನ್ನ ಸೋದರಿಯ ತಾಪತ್ರಯ. ಆಕೆ ವಿದ್ಯಾವಂತೆ. ಖಾಯಂ ನೌಕರಿ. ಕೈ ತುಂಬಾ ಸಂಬಳ. ನಿವೃತ್ತಿಯಾದ ಮೇಲೆ ಯಾವ ಕೆಲಸ ಮಾಡದೆ ಮನೆಯಲ್ಲಿ ಕೂತರೂ ಪಿಂಚಣಿಗೆ ಹಕ್ಕುದಾರಳು. "ಋಣಾನು ಬಂಧ ರೂಪೇಣ ಪತಿ ಪತ್ನಿ ಸುತಾಲಾಯಃ" ಎಂಬ ಹಳೆಯ ಗಾದೆಯಂತೆ, ಒಳ್ಳೆಯ ಪತಿ, ಸ್ವಂತ ಮನೆ, ಸುಖ ಜೀವನಕ್ಕೆ ಇನ್ನೇನು ತಾನೆ ಬೇಕು, ಈಕೆಗೆ. ಬಂಧು ಮಿತ್ರರು ಸೇರಿದ ಜಾಗಗಲೆಲ್ಲಾ , ನಾನು ಚೆನ್ನಾಗಿದೀನಿ, ಸುಖವಾಗಿದೀನಿ ಎಂಬ ಆತ್ಮ ಪ್ರಶಂಸೆ, ಈಕೆಯದು.

ಎಲ್ಲಾ ಇದ್ದರೂ ಏನೋ ಒಂದಿಲ್ಲ ಅನ್ನೋದು ಈಕೆಯ 'ಸ್ವಯಂ ಕಲ್ಪಿತ ಕೊರತೆ.' ಏನು ನಿಮ್ಮ ಕೊರತೆ ಎಂದು ಯಾರಾದರೂ ಹಿತೈಷಿಗಳಂದಾಗ, ರಾಗಾಲಾಪನೆ ಶುರು ಮಾಡ್ತಾರೆ, ಹೀಗೆ : ನಾನು ಚೆನ್ನಾಗೇ ಇದೀನಿ, ಅಗತ್ಯವಾದ್ದೆಲ್ಲಾ ನನ್ನ ಬಳಿ ಇದೆ. ಆದರೆ, 'ಚೆನ್ನಾಗಿರೋ ಆ ನನ್ನ ಸೋದರರು', ನನಗೆ 'ಕೊಡಲಿಲ್ವೇ' ಅಂತ ತಮ್ಮ ದುಃಖ ತೋಡಿಕೊಳ್ತಾರೆ, ಈಕೆ. ಚೆನ್ನಾಗಿದೀನಿ, ಎಲ್ಲಾ ನನ್ನ ಹತ್ತಿರವಿದೆ ಅಂತಾ ನೀವೇ ಹೇಳಿದಿರಿ. ಹೀಗಿರುವಾಗ, ಸೋದರರ ಕಡೆ ಏಕೆ ನೋಡ್ತೀರಿ ನೆರವಿಗಾಗಿ ! ಎಂದರೆ, ಏ, ಅಪ್ಪ ಅಮ್ಮ ಮಾಯವಾದ ನಂತರ, ಸೋದರರಿರೋದೇ ಸೋದರಿಯರನ್ನು ನೋಡಿ ಕೊಳ್ಳೋಕೇ ಅಲ್ವೇ ! ಆಗೊಮ್ಮೆ ಈಗೊಮ್ಮೆ ಸೋದರಿಯರನ್ನು ತೌರಿಗೆ ಕರೆ ತಂದು, ಅದು, ಇದು, ಕೊಡ್ತಾ ಇರಬೇಡವೇ, ಹಾಗಿದ್ರಲ್ವೇನೇ ಚಂದ, 'ಕೊಡಲಿಲ್ವೇ, ಅವರು ಕೊಡಲಿಲ್ವೇ' ಎಂದು ಮತ್ತೆ ಈ ಸೋದರಿ ತಮ್ಮ ಅಳಲು. ತೋಡಿಕೊಂಡರು. ಪಾಪ, ನಿಮ್ಮ ಭಾದೆ ನನಗೆ ಅರ್ಥವಾಗುತ್ತೆ, ಆದರೆ, ಸೋದರಿಯರಾಗಿ, ನೀವು, ಅಣ್ಣಂದಿರಿಗೆ ಏನೇನು ಕೊಟ್ಟುಬಿಟ್ಟಿದ್ದೀರಿ ಎಂದು ಪ್ರಶ್ನಿಸಿದಾಗ, ಆಕೆ ತಮ್ಮ ಬಾಯಿ ಇಷ್ಟಗಲ ತೆಗೆದು, ಆಹಾ ! ಹೆಣ್ಣು ಹೆಂಗಸು, ನಾ ಎಂತದ್ದು ಕೊಡುವುದು, ಅವರಿಗೆ, ಇಷ್ಟಕ್ಕೂ, ಹೆಂಗಸಿನ ಹತ್ತಿರ ಅವರು ಕೈ ಚಾಚಿದರೆ ಗಂಡಸು ತನಕ್ಕೇ ಅವಮಾನವಲ್ವೇ ! ಅನ್ನೋ ನೀತಿ ಪಾಠ ಬೋಧಿಸ್ತಾರೆ, ಈಕೆ. ಮೆಚ್ಚುವಂತಹುದೇ, ಇವರ ವಾದ ಎಂದಿರಾ , 'ತಾ ಅಂಬೋದು ತಲಾಂತರದಿಂದ ಬಂದದ್ದು, ಕೋ ಎನ್ನುವುದು ಕುಲಕ್ಕೇ ಇಲ್ಲಾ' ಎಂಬುದು ಇವರ ತಾರಕ ಮಂತ್ರ. ನನ್ನ ಬಂಧುವಿನ ಕಥೆ ಕೇಳುತ್ತಾ ಮನೆ ಸಮೀಪಿಸಿದೆ. ಆತ ಅತ್ತ ಹೊರಟ, ನಾನು ಮನೆ ಪ್ರವೇಶಿಸಿದೆ.

ಅಂದೆಲ್ಲಾ ನನ್ನ ಮನ ಕೊರೆದ ಒಂದು ವಿಷಯ ಎಂದರೆ, ಯಾಕೆ ನಮ್ಮ ಜನ ಹೀಗಾದರು ! ಎಂಬುದು. ದೇವರು ನಮಗೆ ಕೈ ಕಾಲು ಗಟ್ಟಿಯಾಗಿ ಕೊಟ್ಟಿದ್ದಾನೆ, ಆರೋಗ್ಯ ಭಾಗ್ಯ ಇದೆ. ಶರೀರ ಶ್ರಮ ಪಟ್ಟು ದುಡಿದು, ನಿನ್ನ ಕಾಯಕದ ಫಲ ನೀ ತಿನ್ನು ಎಂದು ಬುದ್ದಿಯನ್ನೂ ಕಲಿಸಿದ್ದಾನೆ, ನಮಗಾ ದೇವರು. ಇಂದು, ನಮಗಿಂತಾ ದುರದೃಷ್ಟವಂತರು, ನಿರ್ಭಾಗ್ಯರು ಎನಿಸಿಕೊಂಡ ನಾನಾ ವಿಧವಾದ ಅಂಗವಿಕಲತೆ ಉಳ್ಳವರೂ ಅವರಿವರ ಮುಂದೆ ಕೈ ಚಾಚದೆ, ತಮ್ಮ ಅನ್ನ ತಾವೇ ಸಂಪಾದಿಸಿಕೊಂಡು ಆತ್ಮ ಗೌರವ ಕಾಪಾಡಿಕೊಂಡಿದ್ದಾರೆ. ವಸ್ತುಸ್ಥಿತಿ ಹೀಗಿದ್ದು, ನಮ್ಮ ಅಂಗಾಂಗಗಳೆಲ್ಲಾ ನೆಟ್ಟಗಿರುವಾಗ, ಒಡವೆ, ವಸ್ತ್ರ, ಹಣ, ಭೂಮಿ, ಮುಂತಾದ ಇಹ ಲೋಕದ ಭೋಗ ಭಾಗ್ಯಗಳಿಗಾಗಿ ಅವರಿವರ ಕಡೆ ನೋಡಿ, 'ಕೊಡಲಿಲ್ವೇ ! ಅವರು ಕೊಡಲಿಲ್ವೇ' ಎಂದೇಕೆ ನಾವು ಅಳಬೇಕು ? ಈ ವಿಚಾರದಲ್ಲಿ ವಿಕಲಾಂಗರಿಗಿಂತಾ ನಾವು ದುರ್ಬಲರಾದೆವೆ ? ಬಹುಶಃ ಇಂತವರನ್ನು ನೋಡಿಯೇ ಇರಬೇಕು, "ಬೇಕು ಬೇಕದು ಬೇಕು ಬೇಕಿದೆನಗಿನ್ನೊಂದು । ಬೇಕೆನುತ ಬೊಬ್ಬಿಡುತಲಿಹ ಘಟವನಿದನು ॥ ಏಕೆಂದು ರಚಿಸಿದನೋ ಬೊಮ್ಮನೀ ಬೇಕು ಜಪ । ಸಾಕೆನಿಪುದೆಂದಿಗೆಲೋ ▯ ಮಂಕುತಿಮ್ಮ" ಎಂದರು, ಅಂದೇ, ಡಿ ವಿ ಜಿ ಯವರು. ನಮ್ಮೀ ಶರೀರ ನಶ್ವರ. ಎಂದಾದರೊಂದು ದಿನ ಇದು ಭೂಮಿಗೆ ಬಿದ್ದು ಮಣ್ಣಾಗುವುದೋ, ಬೆಂಕಿಗೆ ಸಿಕ್ಕಿ ಉರಿದೋ ನಾಶವಾಗುವಂತಹುದು. ನಾವೀ ಲೋಕ ವನ್ನು ಬಿಟ್ಟಾಗ ನಮ್ಮ ಜೊತೆ, ನಮ್ಮ ಪತಿ, ಪತ್ನಿ, ಮಕ್ಕಳು, ಆಸ್ತಿ ಇವ್ಯಾವುದೂ ನಮ್ಮ ಸಂಗಡ ಬರುವುದದಿಲ್ಲ, ನಮ್ಮ ಜೀವಿತಾವಧಿಯಲ್ಲಿ ನಾವು ಮಾಡಿದ ಪುಣ್ಯ ಕಾರ್ಯಗಳು, ದಾನ, ಧರ್ಮದ ಫಲ ಮಾತ್ರವೇ ನಮಗೆ ಸದ್ಗತಿ ದೊರಕಿಸಿಕೊಡುವುದು. ಅದಕ್ಕಾಗಿಯೇ, ನಮ್ಮ ಹಿರಿಯರಂದಿರುವುದು, 'ಪರೋಪಕಾರಾರ್ಥಮಿದಂ ಶರೀರಂ' ಎಂದು. ಅವರಿವರ ಕಡೆ ನೋಡಿ, ಭಿಕ್ಷುಕರಂತೆ, 'ಕೊಡಲಿಲ್ವೇ ,

✍ ಎಂ. ಆರ್. ವೆಂಕಟರಾಮಯ್ಯ, ಬೆಂಗಳೂರು

ಕೊಡಲಿಲ್ವೇ' ಎಂದು ಹಲುಬುವುದಕ್ಕಿಂತಾ, ಓ ದೇವ, ನನಗೆ ಸದ್ಬುದ್ಧಿ ಕೊಡು, ಒಳ್ಳೆಯ ವಿವೇಕ, ವಿವೇಚನೆ ಕೊಡು, ಸಾರ್ಥಕ ಜೀವನ ನಡೆಸುವ ಮಾರ್ಗ ತೋರು, ಮೋಕ್ಷ ದಯಪಾಲಿಸು ಎಂದು ಆ ಸೃಷ್ಟಿಕರ್ತನನ್ನು ನಾವೇಕೆ ಪ್ರಾರ್ಥಿಸಬಾರದು. ಇಂತಹಾ ಕೋರಿಕೆ ಇಹ ಪರಗಳೆರಡಕ್ಕೂ ಒಳಿತಲ್ಲವೇ 'ಬೇಡುವುದಾದರೆ, ನರನನ್ನು ಬೇಡಬೇಡ, ಅವ ಹುಟ್ಟು ತಿರುಕ, ಬದಲಿಗೆ ಆ ದೇವನನ್ನು ಬೇಡು, ನೀ ಬೇಡಿದ್ದನ್ನ ಅವ ಕೊಡಬಲ್ಲ' ಎಂಬ ಪುರಂದರ ದಾಸರ ಮಾತು, 'ಮನುಷ್ಯ ಕೊಟ್ಟಿದ್ದು ಮನೆಯ ತನಕ, ದೇವರು ಕೊಟ್ಟಿದ್ದು ಕೊನೆಯ ತನಕ' ಎಂಬ ಗಾದೆ ಈ ಸಂದರ್ಭದಲ್ಲಿ ಉಲ್ಲೇಖಾರ್ಹ.

ಇದೇ ಸಂದರ್ಭದಲಿ, 'ಕೊಡಲಿಲ್ವೇ ! ಕೊಡಲಿಲ್ವೇ ' ಎಂದು ಅವರಿವರ ಮುಂದೆ ಕೈ ಚಾಚಿ ಬೇಡುವವರು ನೆನಪಿಡಲೇಬೇಕಾದ ಮುಖ್ಯ ಅಂಶವೆಂದರೆ, "ದೇಹೀತಿ ವಚನ ದ್ವಾರಾ ದೇಹಸ್ಥಾಃ ಪಂಚದೇವತಾಃ ಎಂದು ಮುಂದುವರಿಯುವ ಶ್ಲೋಕದಲ್ಲಿ ಕೊಡು, ಕೊಡು ಎಂದು ಕೈ ಚಾಚಿ ಬೇಡುವಾಗ ನಮ್ಮಲ್ಲಿ ನೆಲೆಸಿರುವ ಪಂಚ ದೇವತೆಗಳು, ಅರ್ಥಾತ್, ಲಜ್ಜೆ, ಸಂಪತ್ತು, ಧೀ ಪ್ರಜ್ಞೆ, ಧೃತಿ ಮತ್ತು ಕೀರ್ತಿಗಳು ನಮ್ಮನ್ನು ಅಗಲಿ ಹೋಗುವುವು ಎಂದಿದೆ ಪ್ರಸಕ್ತ ಶ್ಲೋಕ. ಆದ್ದರಿಂದ, ಸದಾ 'ಕೊಡಲಿಲ್ವೇ, ಕೊಡಲಿಲ್ವೇ' ಎಂದು ಪ್ರಲಾಪಿಸುತ್ತಾ ಈ ಶ್ರೇಷ್ಠ ಮಾನವ ಜನ್ಮವನ್ನು ವ್ಯರ್ಥ ಮಾಡದೆ, ಪರಾವಲಂಬಿಗಳಾಗದೆ, ನಮಗೆ ಅಗತ್ಯವಾದದ್ದನ್ನು ನಾವೇ ಶ್ರಮವಹಿಸಿ ದುಡಿದು ಗಳಿಸೋಣ, ನಮ್ಮ ಆತ್ಮ ಗೌರವವನ್ನು ಕಾಪಾಡಿ ಕೊಳ್ಳೋಣ, ಮಾನವೀಯ ಗುಣಗಳನ್ನು ವೃದ್ಧಿಸಿಕೊಂಡು, ಸದಾ ಸತ್ಕರ್ಮ, ಸದಾಚಾರ, ಸದ್ವ್ಯವಹಾರ, ಧ್ಯಾನ ಪೂಜಾದಿ ಕಾರ್ಯಗಳಿಗಾಗಿ ಹೆಚ್ಚು ಕಾಲವನ್ನು ವಿನಿಯೋಗಿಸಿ, "ಇಲ್ಲಿಯ ಬಾಳು ಅಲ್ಲಿಯ ಬದುಕಿಗೆ ಸುಖದ ಸೋಪಾನ" ಮಾಡಿಕೊಂಡು ವಿವೇಕಿಗಳಾಗೋಣ.

# ಇಲ್ಲೊಂದು ಆತ್ಮಕತೆ

ಇವರು "ಪಟ್ಟ ಪಾಡೆಲ್ಲವು ಹುಟ್ಟಿ ಹಾಡಾದಂತೆ" ಅವರ ಜೀವನದುದ್ದಕ್ಕೂ ನಡೆದ, ಅನುಭವಿಸಿದ ಘಟನೆಗಳು ಒಂದಲ್ಲ ಎರಡಲ್ಲ, ಅವೆಲ್ಲವನ್ನು ಅನುಭವಿಸಿ ನಿಭಾಯಿಸಿ ಜೀವನಕ್ಕೆ ಒಂದು ಸೂತ್ರವನ್ನು ಕೊಟ್ಟು frame ಹಾಕಿ ವ್ಯವಸ್ಥೆಯ ವ್ಯಸ್ಥೆ ಅಂತ ಹೇಳುತ್ತವೆಯಲ್ಲ ಆ ತರಹ ಅವರು ಸಮಾಜಕ್ಕೆ ಮಾದರಿಯಾಗಿದ್ದಾರೆ.

ಕೇವಲ ತಮ್ಮ ಬಗ್ಗೆ ಅಲ್ಲ ಇಡೀ ಜನಾಂಗದ ಏಳ್ಗೆಯನ್ನು ಬಯಸುವ ಗುರುಗಳ ಮನೋಭಾವ ಆಶಾಕಿರಣ, ಅವರ ಬಗ್ಗೆ ಇರುವ ಕಳಕಳಿ ಎತ್ತಿ ತೋರಿಸುತ್ತದೆ. ಇಂತಹ ಅಮೋಘ ಕೃತಿಯನ್ನು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಹೆಗ್ಗಳಿಕೆ ಅವರದಾಗಿದೆ. ಆ ಮೂಲಕ ಇಂತಹ ಗುರುಗಳು ನಮ್ಮವರು ಎನ್ನುವ ಅಭಿಮಾನ ಹೆಮ್ಮೆ ನಮ್ಮದಾಗಿದೆ.

ಅವರ ಈ ಅಮೂಲ್ಯ ಕೃತಿಗೆ ನಾಡಿನ ಬೇರೆ ಬೇರೆ ಮೂಲೆಯಿಂದ ಅನೇಕ ಪ್ರಶಸ್ತಿಗಳು ಸಿಕ್ಕಿವೆ. ಕರ್ನಾಟಕ ವಿ.ವಿ.ದ. ಪ್ರೊ ಸ. ನ. ಮಾಳವಾಡ ಪ್ರಶಸ್ತಿ, ಕ.ಸಾ.ಪ.ದ ನಿಡಸಾತಿ ಪುಟ್ಟಸ್ವಾಮಯ್ಯ ದತ್ತಿ ನಿಧಿ ಪ್ರಶಸ್ತಿ, ನರೇಗಲ್‌ನ ಬಾಲಕೃಷ್ಣ ಸಾಹಿತ್ಯ ಪುರಸ್ಕಾರ, ಕಲಬುರ್ಗಿಯ ಕನ್ನಡ ನಾಡು ಲೇಖಕರ ಮತು ಓದುಗರ ಒಕ್ಕೂಟ ನಿಯಮಿತ ಸಾಹಿತ್ಯ ಪ್ರಶಸ್ತಿ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಮುಂತಾದವು.

# ನಾತಿ ಚರಾಮಿ

ಕೊಠಡಿಯೊಳಗೆ ಹೋದಳು. ಈಕೆ ನೆನಪಿಸಿಕೊಳ್ಳತೊಡಗಿದಳು. ಮನಸ್ಸೇಕೊ ಭಾರವೆನಿಸತೊಡಗಿತ್ತು. ಕಾಲಲ್ಲಿ ಸೀರೆ ತೊಡಕಿದಂತಾಗಿ ಹೆಜ್ಜೆ ತಡವರಿಸಿತು. ಸಾವರಿಸಿಕೊಳ್ಳತೊಡಗಿದಾಗ ಒಳಗಿನಿಂದ ಮಾತುಗಳು ಕೇಳಿಸತೊಡಗಿದವು. 'ಯಾಕೆ ನೀವು ಬಂದವರ ಮುಂದೆ ಅಳುತ್ತಾ ಕೂಡುತ್ತೀರಿ? ನಿಮ್ಮ ಉಪಚಾರಕ್ಕೆ ಏನು ಕಡಿಮೆಯಾಗಿದೆ, . . . ' ಮುಂದೆ ಏನು ಹೇಳುತ್ತಿದ್ದಳು ಅದನ್ನು ಕೇಳಲಾಗಲಿಲ್ಲ. ಎದುರಿನಿಂದ ಯಾರೊ ಬಂದಂತಾಗಲು ಆಕೆ ಪಾವಟಿಗೆಗಳನ್ನು ಇಳಿಯತೊಡಗಿದಳು. ಗಂಡ ಆಗಲೇ ಇಳಿದುಹೋಗಿದ್ದ. ಉಪಚಾರಕ್ಕೆ ಏನೂ ಕಡಿಮೆ ಇರಲಿಲ್ಲ. ಆದರೆ ಅಲ್ಲಿ ಭಾವನೆಗಳಿದ್ದವೆ, ಆಸ್ಪತ್ರೆಯ ದಾಯಿ ಇದಕ್ಕಿಂತ ಚೆನ್ನಾಗಿ ಉಪಚರಿಸಬಲ್ಲಳು. ದಾಯಿ ಮಾಡುವದು ಹಣಕ್ಕಾಗಿ, ಆದರೆ ಇಲ್ಲಿ?.ಹಣಕ್ಕೇನೂ ಕೊರತೆಯಿರಲಿಲ್ಲ. ಆದರೆ ಏನೋ ಕೊರತೆ ಎನಿಸುತ್ತದೆ. ಸುಖವನ್ನು ಹಂಚಿಕೊಳ್ಳುವಾಗ ಅದೆಷ್ಟು ಸಂತಸದಲ್ಲಿ ಇದ್ದಳಾಕೆ, ದುಃಖದ ಈ ಸಮಯದಲ್ಲಿ ಅದು ಎಲ್ಲಿ ಹೋಯಿತು ಯಾಕೆ? ಗಂಡನಿಗೆ ತನ್ನ ಸಾಹಚರ್ಯ ಬೇಕೆಂದು ಅವಳಿಗೇಕೆ ಅನಿಸುತ್ತಿಲ್ಲವೊ, ಅವಳ ಒಳ್ಳೆಯತನ ಕಾಣಿಸದಾಗಿತ್ತು.

ತೀರ ಯಾಂತ್ರಿಕವಾದ ಆ ಉಪಚಾರ, ಅದೆಷ್ಟು ಪರಣಾಮ ಬೀರೀತು? ಸಂಸಾರದಲ್ಲಿ ಸುಖ ಮಾತ್ರ ಬೇಕೆ. ನೆನಪಿಸಿಕೊಳ್ಳತೊಡಗಿದಳು. ಇಬ್ಬರೂ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡಿದ್ದಾರೆಯೇ?. ಧರ್ಮೆಚ ಅರ್ಥೇಚ. . . . . . . . ನಾತಿ ಚರಾಮಿ. ಅಥವಾ ಪತ್ನಿ ಅರ್ಥಮಾಡಿಕೊಂಡು. . . . . ದೀರ್ಘವಾಗಿ ಉಸಿರು ಹಾಕಿದಳು. ಮನುಷ್ಯ ತನ್ನ ನೋವನ್ನು ತಾನೇ ಅನುಭವಿಸಬೇಕು ಗಂಡನೊ ಹೆಂಡತಿಯೊ 'ಯಾರಿಗೆ ಯಾರುಂಟು ಎರವಿನ ಸಂಸಾರ', ದಾಸರ ನುಡಿ ಎಷ್ಟು ಸತ್ಯವಾದುದು. ಆತನ ಮೊದಲಿನ ಸ್ಥಿತಿಗೂ ಈಗಿನ ಸ್ಥಿತಿಗೂ ಇರುವ ವ್ಯತ್ಯಾಸವನ್ನು ಗಮನಿಸಿದಾಗ ಆಕೆಗೆ ಬಹಳೆ ಕೆಡುಕೆನಿಸಿತು.




**ಮುಂಬಯಿ ಕನ್ನಡ ಸಂಘದಲ್ಲಿ ದಿನಾಂಕ 23.01.2016 ಶನಿವಾರದಂದು ಖಾಲ್ಸಾ ಕಾಲೇಜು ಕನ್ನಡ ಪ್ರೇಮಿ ಮಂಡಳಿಯ ದತ್ತಿ ಉಪನ್ಯಾಸಕರಾಗಿ ಆಗಮಿಸಿದ ಪತ್ರಕರ್ತ ಶ್ರೀ ಸುರೇಶ್ ಆಚಾರ್ಯ ಹಾಗೂ ದಿ. ರಂಗಸ್ವಾಮಿ ದತ್ತಿ ಉಪನ್ಯಾಸಕ್ಕೆ ಪತ್ರಕರ್ತ ರಮೇಶ್ ಎನ್. ಬಿರ್ತಿಯವರು ಆಗಮಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಲೇಖಕಿ ಗೋರೆಗಾಂವ್ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷೆ ಶ್ರೀಮತಿ ಶಕುಂತಳಾ ಆರ್. ಪ್ರಭು ವಹಿಸಿದ್ದರು. ವೇದಿಕೆಯಲ್ಲಿ ಕನ್ನಡ ಸಂಘದ ಅಧ್ಯಕ್ಷರಾದ ಜಿ.ಎಸ್. ನಾಯಕ್. ಗೌ.ಪ್ರ. ಕಾರ್ಯದರ್ಶಿ ಸತೀಶ್ ಬಂಗೇರ ಉಪಸ್ಥಿತರಿದ್ದರು. ಸಮಾರಂಭದಲ್ಲಿ ಡಾ. ಸುನೀತಾ ಶೆಟ್ಟಿ ಮತ್ತು ಖಾಲ್ಸಾ ಕಾಲೇಜಿನ ಹಳೆ ವಿದ್ಯಾರ್ಥಿಗಳು, ಸಂಘದ ಪದಾಧಿಕಾರಿಗಳು, ಉಪಸ್ಥಿದ್ದರು. ಕಾರ್ಯಕ್ರಮವನ್ನು ಸಂಘದ ಜೊತೆಕಾರ್ಯದರ್ಶಿ ಸೋಮನಾಥ್ ಕರ್ಕೇರ ಅವರು ನಿರೂಪಿಸಿದರು. ಸುಧಾಕರ ಪೂಜಾರಿ ವಂದಿಸಿದರು.**

# ದೀಪಾ ಫಡ್ಕೆ ಇವರ ಚೊಚ್ಚಲ ಕೃತಿ 'ಋತ್'

ಚೊಚ್ಚಲ ಕೃತಿಯಲ್ಲೇ ದೀಪಾ ಇವರು ತಾನೋರ್ವ ಸೃಜನಶೀಲ ಬರಹಗಾರ್ತಿ ಎನ್ನುವುದನ್ನು ತನ್ನ ಚೊಚ್ಚಲ ಕೃತಿಯಲ್ಲಿ ಬರುವ ಲೇಖನಗಳ ಮೂಲಕ ರುಜುಪಡಿಸಿದ್ದಾರೆ. ನಮ್ಮ ಕ.ಸಾ.ಪ. ಮಹಾರಾಷ್ಟ್ರ ಘಟಕ ಆಯೋಜಿಸಿದ್ದ 9ನೇ ಮಹಾರಾಷ್ಟ್ರ ರಾಜ್ಯ ಕನ್ನಡಿಗರ ಸಾಹಿತ್ಯ ಸಮ್ಮೇಳನದಲ್ಲಿ (ಜನವರಿ 24 ರಿಂದ 26, 2015) ಇವರು ಹೆಳವನಕಟ್ಟೆ ಗಿರಿಯಮ್ಮನವರ ಸಾಧನೆಯ ಬಗ್ಗೆ ಪ್ರಸ್ತುತಪಡಿಸಿದ್ದ ಉಪನ್ಯಾಸ ಆಲಿಸಿದಾಗ ಅವರು ವಾಗ್ವೈಖರಿಗೆ ತಲೆತೂಗಿದವರಲ್ಲಿ ನಾನೂ ಒಬ್ಬ. ಅವರು ನನ್ನ ಆತ್ಮೀಯ ಸಾಹಿತಿ ಮಿತ್ರರಲ್ಲೊಬ್ಬರಾದ ಡಾ. ಪ್ರದೀಪ ಕುಮಾರ ಹೆಬ್ರಿಯವರ ಸಂಬಂಧಿಯೆಂದು ತಿಳಿದ ನಂತರವಂತೂ ಅವರ ಬಗ್ಗೆ ಇನ್ನಷ್ಟು ತಿಳಿಯುವ ಕುತೂಹಲ. ದೀಪಾ ಅವರ ಕೃತಿ 'ಋತ್'ವನ್ನು ಡಾ. ಹೆಬ್ರಿಯವರು ಕಳುಹಿಸಿಕೊಟ್ಟಾಗ ಆಸಕ್ತಿಯಿಂದ ಕೃತಿಯನ್ನು ಕೈಗೆತ್ತಿಕೊಂಡೆ. ಕೃತಿ ಓದತೊಡಗಿದಾಗ ಈ ಎಲ್ಲ ಬರಹಗಳ ಹಿನ್ನೆಲೆ ನನಗೆ ಮೊದಲೇ ತಿಳಿದಿದ್ದರೂ ಏಕೋ ಹೊಸತನ್ನು ಓದಿದ ಅನುಭವ. ಇಲ್ಲಿ ದೀಪಾ ಅವರು ಲೇಖನಗಳನ್ನು ಕಟ್ಟಿಕೊಟ್ಟ ರೀತಿ ಆಪ್ತವೆನಿಸುತ್ತದೆ. ಈಗಾಗಲೇ ನಾವು ತಿಳಿದುಕೊಂಡಿರುವ ವಿಷಯಗಳಿಗೆ ಒಂದು ಹೊಸ ಆಯಾಮವನ್ನು ಲೇಖಕಿ ಇಲ್ಲಿ ಕೊಟ್ಟಿರುವುದನ್ನು ನಾವು ಕೃತಿಯ ಎಲ್ಲ ಲೇಖನಗಳಲ್ಲೂ ಕಾಣುತ್ತೇವೆ. ಇಲ್ಲಿ ನಿರೂಪಣೆಯಲ್ಲಿನ ಹೊಸತನ ಅಭಿವ್ಯಕ್ತಿಯಲ್ಲಿ ಬರುವ ತಾಜಾತನ. ಅದೇ ಭಾಷೆಯ ಮೇಲೆ ಅವರಿಗಿರುವ ಹಿಡಿತ, ಸರಳ ಸುಂದರ ಶೈಲಿ ಓದಗರನ್ನು ಸೆರೆಹಿಡಿಯುತ್ತವೆ. ಪುರಾಣ ಕಾಲದ ಪಾತ್ರಗಳನ್ನು ಸಮಕಾಲೀನ ಚಿಂತನೆಯೊಂದಿಗೆ ಸಮದೂಗಿಸಿ ಹೆಣೆದಿರುವ ಲೇಖನಗಳು ಲೇಖಕಿಯವರ ಸಮಕಾಲೀನ ಪ್ರಜ್ಞೆಗೆ ಕನ್ನಡಿ ಹಿಡಿಯುತ್ತದೆ.

ಇಲ್ಲಿ ಬರುವ ಭಾವನಾ ಪ್ರಧಾನ ಲೇಖನಗಳಲ್ಲಿ ಸ್ತ್ರೀಯ ಅಂತರಂಗದ ಒಳನೋಟವನ್ನು ಅತ್ಯಂತ ಸಮರ್ಥ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಸ್ತ್ರೀ ಸಹಜ ದೃಷ್ಟಿಕೋನ ಇಲ್ಲಿ ಕೃತಿಯುದ್ದಕ್ಕೂ ಕೈಯಾಡಿಸಿರುವುದನ್ನು ನಾವು ಅಲ್ಲಗಳೆಯುವಂತಿಲ್ಲವಾದರೂ ಅದಕ್ಕೆ ಅವರು ಸಮರ್ಥನೆಯನ್ನು ನೀಡಿರುವುದನ್ನು ಕಾಣಬಹುದಾಗಿದೆ.

ದೀಪಾ ಫಡ್ಕೆ ಅವರದು ಬಹುಮುಖ ಪ್ರತಿಭೆ. ಅವರು ನೃತ್ಯ, ಸಂಗೀತ ಕಲಾಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿದವರು. ಚಂದನ ಮತ್ತು ಉದಯ ಟಿ.ವಿ.ಯಲ್ಲಿ ನಿರೂಪಕಿಯಾಗಿ ಸಹೃದಯರ ಮನಸು ಗೆದ್ದವರು. 'ಕರಿಮಲೆಯ ಕಗ್ಗತ್ತಲು' ರಾಜ್ಯ ಪ್ರಶಸ್ತಿ ಪುರಸ್ಕೃತ ಚಿತ್ರದಲ್ಲಿ ಹಿನ್ನೆಲೆಗಾಯನ ಹಾಡಿದ ಶ್ರೇಯ ಇವರದು. ನಾಡಿನ ಅನೇಕ ಪತ್ರಿಕೆಗಳಲ್ಲಿ ಬೆಳಕುಕಂಡಿರುವ ಇವರ ಲೇಖನಗಳು ಇಲ್ಲಿ ಒಂದೆಡೆ ಈ ಕೃತಿಯ ಮೂಲಕ ನಮಗೆ ಲಭ್ಯವಾಗಿವೆ. ದಾಸ ಸಾಹಿತ್ಯದ ಕುರಿತು ಮಹಾಸಂಶೋಧನಾ ಪ್ರಬಂಧದ ಸಿದ್ಧತೆಯಲ್ಲಿರುವ ದೀಪಾ ಫಡ್ಕೆ ಅವರಿಗೆ ಶುಭವನ್ನು ಹಾರೈಸುತ್ತಾ, ಅವರ ಕೃತಿಯಲ್ಲಿರುವ ಲೇಖನಗಳ ಬಗ್ಗೆ ನನ್ನ ಒಂದಿಷ್ಟು ಅನಿಸಿಕೆಗಳನ್ನು ತಮ್ಮ ಮುಂದೆ ಹಂಚಿಕೊಳ್ಳಬಯಸುತ್ತೇನೆ.

ಕೃತಿಯಲ್ಲಿ ಬರುವ ಮೊದಲ ಲೇಖನ 'ಮುಕ್ತಿ ಅನ್ನುವ ಪಮರ ಪದ'. ಅದೇ ರೀತಿ ಎರಡನೆಯ ಲೇಖನ 'ಭಕ್ತಿಯೋಗ'. ಎರಡೂ ಲೇಖನಗಳ ಮೂಲ ಆಶಯ ಮುಕ್ತಿ. ಮುಕ್ತಿಯೆಂದರೆ ಸಂಸಾರದ ಕ್ಷಣ ಭಂಗುರತೆಯಿಂದ ಬಿಡುಗಡೆಗೊಳ್ಳುವುದು. ಜೇಡ ಕಟ್ಟಿದ ಬಂಧನದಂತಿರುವ ತನ್ನ ಬದುಕಿನ ಆಸೆಗಳ ಬಂಧಗಳಿಂದ ಕಳಚಿಕೊಳ್ಳುವುದು ಈ ಭೂಮಿಯಲ್ಲಿ ಮನುಷ್ಯನಿಗಷ್ಟೇ ಅವಕಾಶವಿರುವುದು. ಏಕೆಂದರೆ ಯೋಚನೆಗಳ ಆಗರ. ಅವನು ಯೋಚನೆಗಳನ್ನು ಮಾಡಿದಲ್ಲೇ ಬಂಧಗಳು ಹುಟ್ಟಿಕೊಳ್ಳುವುದು. ಬಂಧ ಮೂಡಿದ ಮೇಲೆಯೇ ಮುಕ್ತಿಗೆ ಹಾತೊರೆಯುವುದು. ಆಸೆ ಮನುಷ್ಯನನ್ನು ಬದುಕಲು ಪ್ರೇರೇಪಿಸಿದರೆ ಸುಖ ಮನುಷ್ಯನನ್ನು ಕಳಕೊಳ್ಳುವ ಭ್ರಾಂತಿಗೆ ತಳ್ಳುತ್ತದೆ. ಇದರಿಂದ ಪಾರಾಗಿ ಬಿಡುಗಡೆಯನ್ನು ಹೊಂದುವ ನಿರಾಳತೆಯೆ ಮುಕ್ತಿ. ಎರಡನೆಯ ಲೇಖನ 'ಭಕ್ತಿಯೋಗ'. ಭಕ್ತಿಪಂಥ ನಮ್ಮ ಭಾರತೀಯ ಸಮಾಜಕ್ಕೆ ನೀಡಿದ ಬಹು ದರ್ಶನವೆಂದರೆ ಭಕ್ತಿ. ಮನುಷ್ಯ ಮುಗಿಲೆತ್ತರದ, ಕೈಗೆ ನಿಲುಕದ ಸ್ವರೂಪ ಉದಾತ್ತವಾದ ಚಿಂತನೆ, ಧ್ಯೇಯದ ಮುಂದೆ ಶರಣು ಹೋಗುವುದೇ ಭಕ್ತಿ. ತನ್ನನ್ನು ಮರೆಸುವಂತಹ ಪ್ರೇಮ. ಆ ಪ್ರೇಮದಿಂದ ಸಂಪೂರ್ಣ ಬದುಕನ್ನು ಹಂತ ಹಂತಗಳಲ್ಲಿ ಕ್ರಮ ಕ್ರಮವಾಗಿ ಭಗವಂತನಿಗೆ ಅರ್ಪಿಸಿ ನೀರಲ್ಲಾದರೂ ಹಾಕು ಎಂದು ನಿಶ್ಚಿಂತೆಯಿಂದ ಇರುವ ಮನುಷ್ಯನ ಆಧ್ಯಾತ್ಮಿಕ ಯಾತ್ರೆಯೇ ಭಕ್ತಿಯೋಗವೆಂದು ಲೇಖಕಿ ಇಲ್ಲಿ ಹೇಳುತ್ತಾರೆ.

'ಮಾಯೆ ಎಂಬ ಸುರಸುಂದರಿ' ಲೇಖನದಲ್ಲಿ ಇವರು ಹೆಣ್ಣು ಮಾಯೆಯ ಪ್ರತಿರೂಪವೆಂದು ಕರೆದಿದ್ದಾರೆ. ಇಲ್ಲಿ ಹೆಣ್ಣು ಮಾಯೆಯಾಗಿ ಸಂತ ತುಲಸೀದಾಸರನ್ನು, ಪುರಂದರ ದಾಸರನ್ನು ಕನಕದಾಸರ ಬದುಕಲ್ಲಿ ಮಾಡಿದ ಮಾಯೆಯತ್ತ ಗಮನ ಹರಿಸುತ್ತಾರೆ. 'ಮನಸ್ಸು ಮತ್ತು ಹರಿದಾಸರು' ಲೇಖನದಲ್ಲಿ ದೀಪಾ ಅವರು ಭಾರತೀಯ ದಾರ್ಶನಿಕ ಶಾಖೆಗಳು ಅದರ ತತ್ವಗಳಲ್ಲಿ ಭಿನ್ನಾಭಿಪ್ರಾಯವಿದ್ದರೂ, ಮನಸ್ಸೆಂಬ ವಸ್ತುವಿಗೆ ಒಂದು ಉತ್ಕೃಷ್ಟ ಸ್ಥಾನವಿರುವುದನ್ನು ಗುರುತಿಸುತ್ತಾರೆ. ಭಾರತೀಯ ದರ್ಶನ ಶಾಸ್ತ್ರದಲ್ಲಿ ಆತ್ಮವನ್ನು ಸಂಬಂಧಿಸಿದಂತೆ ಬುದ್ಧಿ (ಜ್ಞಾನ) ಅಹಂಕಾರ (ಅಹಂ) ಮತ್ತು ಮನಸ್ಸು (ಮ) ಎನ್ನುವ ಮೂರು ಪದ ಪ್ರಯೋಗವನ್ನು ಕಾಣಬಹುದು. ಬುದ್ಧಿ ಮತ್ತು ಅಹಂಕಾರ ಮನಸ್ಸಿನ ಬೇರೆ ಬೇರೆ ಆಯಾಮಗಳೆಂದು ಲೇಖಕಿ ಗುರುತಿಸಿದ್ದಾರೆ.

✍ ಡಾ. ಕರುಣಾಕರ್ ಎನ್. ಶೆಟ್ಟಿ, ಪಣಿಯೂರ್

'ಪ್ರಾರ್ಥನೆ' ಲೇಖನದಲ್ಲಿ ಮಾನವನ ಬದುಕಿನಲ್ಲಿ ಪ್ರಾರ್ಥನೆಯ ಮಹತ್ವವನ್ನು ತೆರೆದಿಟ್ಟಿದ್ದಾರೆ. ಹಾಡಿನ ಮೂಲ ಎಲ್ಲರನ್ನೂ ಒಂದೇ ಗುಂಗಿನಲ್ಲಿ ಕಟ್ಟಿಹಾಕುವ ವಿಧಿಯೇ ಪ್ರಾರ್ಥನೆಯೆಂದು ಲೇಖಕಿ ಬರೆಯುತ್ತಾರೆ.

'ಅನುಭವದಡಿಗೆಯ ಮಾಡಿ' ಲೇಖನದಲ್ಲಿ ಅನುಭವ ಮತ್ತು ಅನುಭಾವ ಇವು ಭಗವಂತನನ್ನು ಭಕ್ತ ತನ್ನ ಜೊತೆ ಸಮೀಕರಿಸಿ ಒಂದಾಗಿ ಮಾಡಿಕೊಳ್ಳುವ ಭಾವವೆನ್ನುತ್ತ, ಇಲ್ಲಿ ಗಿರಿಧರನ ಜೋಗತಿ ಮೀರಾ, ಬರುತ್ತಾಳೆ. ಅನುಭವಗಳನ್ನು ಪ್ರೀತಿಯಿಂದ ಆಚರಿಸಿದರೆ ಅದು ಧರ್ಮ ಮನಸ್ಸಿಗೆ ಒಪ್ಪಿಗೆಯಾದರೆ ಅದೇ ದೇವರೆಂದು ಲೇಖಕಿ ಇಲ್ಲಿ ತಿಳಿಸುತ್ತಾರೆ.

ಇಲ್ಲಿ ಬರುವ ಮತ್ತೊಂದು ಮಹತ್ವದ ಲೇಖನ ನಮ್ಮ ಸಂಸ್ಕೃತಿ ಸಭ್ಯತೆಗೆ ಸಂಬಂಧಿಸಿದ್ದಾಗಿದೆ. ತುಲಸೀದಾಸರ ಮಾನಸಲೋಕದ ರಾಮಚರಿತೆ. ಮರ್ಯಾದಾ ಪುರುಷೋತ್ತಮ ರಾಮ ಯಶೋಗಾಥೆಗೆ ಮೀಸಲಾದರೆ 'ಅಕ್ಕ ನಾನೊಂದು ಕನಸ ಕಂಡೆ' ಹೆಣ್ಣು ಕುಲಕ್ಕೆ ಕನಸ್ಸಿನ ಪರಿಗೆ ಕಾವ್ಯದ ಮೆರುಗು ನೀಡಿ ಕನಸ್ಸು ಕಾಣುವ ಹೆಣ್ಣು ಮನಸ್ಸನ್ನು ಅಮರವಾಗಿಸಿದ ಅಕ್ಕ ಮಹಾದೇವಿಯ ಕುರಿತಾದ ಲೇಖನ.

ಇಲ್ಲಿ ಬರುವ ಎಲ್ಲಾ ಲೇಖನಗಳು ವಿಜಯವಾಣಿ, ಉದಯವಾಣಿ, ಗಾಂಧಿ ವಾರ್ತಾ, ಸುಬ್ಬಿ ಪತ್ರಿಕೆಯಲ್ಲಿ ಬೆಳಕು ಕಂಡಂತವುಗಳು.

'ಏನು ಸಾಧನೆ ಮಾಡಿ ಕೃಷ್ಣನ ಕರವ ಸೇರಿತೋ' ........ ಮಳೆಯಿಂದಾದ ಕೊಳವಿನ ಅದೃಷ್ಟವನ್ನು ತೆರೆದಿಡುವ ಕಥಾನಕ.

'ವಸುಂಧರೆ ಮತ್ತವಳ ರೂಪ' ಲೇಖನದಲ್ಲಿ ಧರಿತ್ರಿ.... ನಾನಾ ಮುಖಗಳನ್ನು, ಆಯಾಮಗಳನ್ನು ಲೇಖಕಿ ಅನಾವರಣಗೊಳಿಸಿದ್ದಾರೆ.

'ಮಾತೃ ಸ್ವರೂಪಿಣಿ ಗೌರಿ ನಮೋಸ್ತುತೆ' ಲೋಕ ಮಾತೆ ಗೌರಿಯ ಮನಸ್ಸಿನ ಒಳನೋಟವನ್ನು ಚಿತ್ರಿಸಿ ಆಕೆ ನಮ್ಮ ಸಂಸ್ಥೆಯನ್ನು ಪೊರೆಯುವ ಭಾವಶಕ್ತಿಯೆಂದು ಕೊಂಡಾಡಿದ್ದಾರೆ.

ಹೊಸ ವಸಂತದಲ್ಲಿ ಬರುವ ಯುಗಾದಿಯ ಸವಿ ಸಂಭ್ರಮವನ್ನು ಮನತಣಿಸುವಂತೆ ಕಟ್ಟಿಕೊಟ್ಟಿರುವ ಲೇಖಕಿ, ಸಂಕ್ರಾಂತಿಯ ಬೆಳಕಿಗೂ ಬೊಗಸೆಯೊಡ್ಡಿದ್ದಾರೆ.

ಶರಣ ಭಾವ ಸೌಂದರ್ಯ ಲಹರಿ ಶರಣಪ್ಪ, ದಾಸಪ್ಪ ಅವಧೂತರ ಸಿದ್ಧಸ್ಥಿತಿ ಹಾಗೂ ಸೂಫಿಗಳ ಪುನಾಸ್ಥಿಯನ್ನು ಕುರಿತಾದ ವಿಶ್ಲೇಷಣೆಯಿದೆ.

'ಉಗಾಭೋಗ' ಮತ್ತು ಹರಿಸಂಕೀರ್ತನೆ ಈ ಲೇಖನದಲ್ಲಿ ಉಗಾಭೋಗಗಳ ಆಧ್ಯಾತ್ಮಿಕ ನೆಲೆಯನ್ನು, ಸಾಹಿತ್ಯವನ್ನು ಲೇಖಕಿ ಚಿತ್ರಿಸಿದ್ದಾರೆ. ಪುರಂದರ ದಾಸರು, ಶ್ರೀಪಾದದಾಸರು, ವ್ಯಾಸರಾಯರ ಉಗಾಭೋಗಗಳ ಮಹತ್ವದ ಮೇಲೆ ಇಲ್ಲಿ ಬೆಳಕು ಚೆಲ್ಲಲಾಗಿದೆ.

'ವೈಷ್ಣವ ಜನತೋ' ಗುಜರಾಥಿ ಆದಿ ಕವಿ ನಸರೀ ಮೆಹ್ತಾ ಅವರು ರಚಿಸಿದ ಭಜನೆ ಗಾಂಧೀಜಿಯವರ ಬದುಕಿನಲ್ಲಿ ಮಾಡಿದ ಪ್ರಭಾವ, 'ರಾಮಧುನ್ ಜಪಿಸಿದ ಕರ್ಮಯೋಗಿ' ಬಾಪು ಅವರ ಬದುಕಿನಲ್ಲಿ ರಾಮ ಅಂದರೆ ಕಾಲಾತೀತ ರಾಮ, ಸರ್ವವ್ಯಾಪಿ ರಾಮ ಅವನ ಮೇಲೆ ಆವರಿಸಿದ್ದ ಶ್ರದ್ಧೆಯ ಚಿತ್ರಣವಿದೆ.

ಮುಂದೆ ಬರುವ ಕೃತಿಯ ಎರಡನೆಯ ಭಾಗದಲ್ಲಿ ಲೇಖಕಿ 'ಋತ್' ಕಥಾನಕಗಳೆಂದು ಕರೆದಿದ್ದಾರೆ. ಸ್ತ್ರೀ ಸಂಬಂಧಿತ ಕಥೆಗಳಿಗೆಂಥ ಮಹತ್ವ ಎಂಬ ಅವಜ್ಞೆಯಿಂದ ತುಂಬಿರುವ ಪುರುಷ ಮನೋಧರ್ಮದ ಪುರಾಣದ ಮಹಿಳೆಯರ ದಿವ್ಯ ಮೌನಗಳಿವೆ. ಧ್ವನಿಯಾಗುವ ಕಥಾನಕಗಳೆ 'ಋತ್' ಕಥಾನಕಗಳು. ಇಲ್ಲಿ ಲೇಖಕಿ ರಾಮಾಯಣದ ಕೌಸಲ್ಯೆ, ಮಂಡೋದರಿ, ಮೈಥಿಲಿ ಅಲ್ಲದೆ, ಮಹಾಭಾರತದ ಸತ್ಯವತಿ, ಗಾಂಧಾರಿ, ಕುಂತಿ, ದೇವಕಿ ಅಲ್ಲದೆ, ಶಂಕುಂತಲೆ ಇವರು ಬದುಕಿನಲ್ಲಿ ಅನುಭವಿಸಿದ ಕಷ್ಟಕೋಟಲೆಗಳನ್ನು ಇಲ್ಲಿ ಪರಕಾಯ ಪ್ರವೇಶ ಮಾಡಿ ಲೇಖಕಿ ಕಟ್ಟಿಕೊಟ್ಟಿದ್ದಾರೆ.

ಕೌಸಲ್ಯೆ ಅಯೋಧ್ಯೆಯ ಅರಮನೆ ಪ್ರವೇಶಿಸಿದ ನಂತರದ ಅವಳ ಬದುಕು, ದಶರಥ ಸುಮಿತ್ರಾ ಮತ್ತು ಕೈಕೇಯಿ ಇವರನ್ನು ವಿವಾಹವಾಗುವುದು ನಂತರದ ಅವಳ ಬದುಕು ಓದುಗರ ಮನ ತಟ್ಟುವಂತೆ ಓದುಗರ ಮುಂದೆ ತೆರೆದಿಟ್ಟಿದ್ದಾರೆ.

ರಾವಣನ ಮಡದಿ ಮಂಡೋದರಿ ಅನುಭವಿಸಿದ ನೋವು, ಮರ್ಯಾದಾ ಪುರುಷೋತ್ತಮ ಶ್ರೀರಾಮನ ಕೈ ಹಿಡಿದೂ ಸೀತೆ ಬದುಕಿನಲ್ಲಿ ಅನುಭವಿಸಿದ ದುಃಖ ದುಮ್ಮಾನ, ನದಿ ತೀರದ ದೋಣಿಗೆ ಹುಟ್ಟು ಹಾಕುವ ಬದುಕಿನಿಂದ ರಾಜಭವನದ ಹೊಸ್ತಿಲು ಮೆಟ್ಟಿದರೂ ಸತ್ಯವತಿ ಪಟ್ಟ ತವಕ ತಲ್ಲಣಗಳು ಕಣ್ಣಿದ್ದೂ ಕಣ್ಣಿಗೆ ಬಟ್ಟೆ ಬಿಗಿದು ಲೋಕಕ್ಕೆ ಅಪರೂಪವಾಗಿ ಸ್ವಯಂ ಕುರುಡಿಯಾಗಿ ಬದುಕು ಸವೆಸಿದ ಗಾಂಧಾರಿ, ಕೃಷ್ಣ ಪರಮಾತ್ಮನಿಗೆ ತಾಯಿಯಾಗಿಯೂ ದೇವರ ಬದುಕಿನಲ್ಲಿ ಅನುಭವಿಸುವ ಯಾತನೆ, ವಿಶ್ವಾಮಿತ್ರ ಮೇನಕೆಯ ಮಗಳಾಗಿಯೂ ದುಷ್ಯಂತನ ಮನಸ್ಸು ಗೆದ್ದರೂ, ಶಕುಂತಲೆ ಅನುಭವಿಸಿದ ನೋವು ಇಲ್ಲಿ ಅಕ್ಷರ ರೂಪದಲ್ಲಿ ಪಡಿಮೂಡಿವೆ. ಇವರೆಲ್ಲ ಏಕೆ, ಇವರಿಗಿಂತಲೂ ಅಧಿಕ ನೋವನ್ನುಂಡು ಬದುಕಿದ ಉರ್ಮಿಳಾ, ದ್ರೌಪದಿಯರನ್ನು ಲೇಖಕಿ ಹೇಗೆ ಮರೆತರೆಂದು ನಮ್ಮನ್ನೇ ನಾವು ಪ್ರಶ್ನಿಸುವಂತಾಗುತ್ತದೆ.

ಚೊಚ್ಚಲ ಕೃತಿಯಲ್ಲೇ ಲೇಖಕಿ ಸಾಕಷ್ಟು ಭರವಸೆ ಮೂಡಿಸಿದ್ದಾರೆ. ಅವರ ಇನ್ನಷ್ಟು ಕೃತಿಗಳು ಆದಷ್ಟು ಬೇಗ ಬೆಳಕು ಕಾಣಲೆಂದು ಹಾರೈಸುತ್ತಾ ಅವರಿಗೆ ಅದೇ ರೀತಿ ಪ್ರಕಟಿಸಿರುವ ನಿತ್ಯಗಿರಿ ಪ್ರಕಾಶನ ಅವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

# ಮುಗ್ಧ ಮಗು

ಕೆಲಸಕ್ಕೆ ಹೋಗುವ ಗಡಿಬಿಡಿಯಲ್ಲಿ
ಆ ದಿನ ಅಟೋ ಮುಷ್ಕರವೆಂದು ತಿಳಿದು
ಬಸ್ಸನ್ನೇರಿ ಖಾಲಿಯಿದ್ದ ಜಾಗದಲ್ಲಿ ಕುಳಿತೆ
ತಟ್ಟನೆ ಮೂಗಿದೆ ಬಡಿದ ವಾಸನೆಯಿಂದ
ತಿರುಗಿ ನೋಡಿದೆ ಏನೋ ಸಂಶಯದಿಂದ
ಒಳಗಿಂದೊಳಗೆ ಉಮ್ಮಳಿಸಿ ಬರುತ್ತಿತ್ತು ವಾಂತಿ
ಒಮ್ಮೆ ತಿಳಿದೆ ಅದೇನೋ ಭ್ರಾಂತಿ
ಮತ್ತೊಮ್ಮೆ ಕನ್ನಡಕದ ಕಣ್ಣೊಳಗಿಂದ
ಎಕ್ಸ್‌ರೇ ದೃಷ್ಟಿ ಬೀರಿದೆ
ಕೂರಲೂ ಆಗದೆ, ನಿಲ್ಲಲೂ ಆಗದೆ
ಚಡಪಡಿಸುತ್ತಿದ್ದೆ..
ದುಪ್ಪಟ್ಟವನ್ನೇ ತೆಗೆದು
ಮುಖಕ್ಕೆ ಸುತ್ತುತ್ತಿದ್ದೆ..
ಪಕ್ಕನೆ ಹೊರಳಿ ನೋಡಿದಾಗ
ನೀರು ಕಾಣದ ಮೈಕೈ ಕೂದಲಿನ
ಎಳೆಯಪ್ರಾಯದ ಹೆಣ್ಣವಳು
ತಂಬಾಕು ತಿನ್ನುವುದರಲ್ಲಿ ವ್ಯಸ್ತಳು
ತೊಡೆಯಲ್ಲೊಂದು ಪುಟ್ಟ ಮಗು
ಸ್ನಾನಕಾಣದೆ ತಿಂಗಳಾಗಿರಬಹುದು
ತಕ್ಷಣ ಹೊಳೆಯಿತು ಹಿಂದಿರುವ ಕಥನ
ಈ ಮಗು ಇವಳದಾಗಿರಬಹುದೋ ಎಂಬ ಅನುಮಾನ
ಇಲ್ಲ ಎಂದಿತು ನನ್ನ ಮನ
ಬಸ್ಸು ನಿಲ್ದಾಣ ಮುಟ್ಟುವವರೆಗೂ ಮಲಗಿ
ನಿದ್ರಿಸುತ್ತಿದ್ದ ಮಗುವಿನ ರಹಸ್ಯದ ಅರಿವೂ ಆಯಿತು
ಮರುಗಿತು ಮನಸ್ಸು.. ಮಗುವಿಗಾಗಿ
ಅಸಹ್ಯ ಪಟ್ಟಿತು ನನ್ನ ಮೈಮನವೆರಡೂ
ಆ ಹೆಣ್ಣಿನ ದುರುಳತನಕ್ಕೆ
ದುಡಿದು ತಿನ್ನುವ ಸದೃಢ ಜೀವಕ್ಕೆ
ಭಿಕ್ಷಾಟನೆಯೇ ಸುಲಭ ಮಾರ್ಗವೇ..
ನೊಂದ ಮಾತೃಹೃದಯವಿದು
ಅರಿವಿಲ್ಲದಂತೆ ಅಕ್ಷಿ ತುಂಬಿ ಬಂದಿತ್ತು
ಅರಳಿ ಸುವಾಸನೆ ಬೀರಬೇಕಾದ
ಮುಗ್ಧ ಕಂದಮ್ಮನ ಅವಸ್ಥೆಯ ಕಂಡು...
ತಮ್ಮ ಸ್ವಾರ್ಥಸಾಧನೆಗಾಗಿ
ಏನೂ ಅರಿಯದ ಈ ಮಗುವನ್ನು
ಬಳಸಿಕೊಳ್ಳುವ ಈ ಭಿಕ್ಷುಕರೆಂಬ ಮಹಾ ಕದೀಮರನ್ನು
ಸುಟ್ಟು ಬಿಡುವಷ್ಟು ಕೋಪ
ಹೇಳಿಕೊಳ್ಳಲಿ ಯಾರಲ್ಲಿ..
ಕೇಳುವವರು ಯಾರಿಲ್ಲಿ..
ನಾನಿಳಿಯಬೇಕಾದಲ್ಲಿ ಇಳಿದರೂ
ಮನಸಿನಿಂದ ನೋವು ಮಾತ್ರ ಇಳಿಯಲೇ ಇಲ್ಲ.

**– ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ**

# ಮೈಸೂರುಅಸೋಸಿಯೇಷನ್, ಮುಂಬೈ
# THE MYSORE ASSOCIATION, MUMBAI

ಅರ್ಪಿಸುವ

# ಶ್ರೀರಂಗ ರಂಗೋತ್ಸವ

ದಿನಾಂಕ 12.02.2016

ಶುಕ್ರವಾರ ಸಂಜೆ 6.30ಕ್ಕೆ : **ರಂಗೋತ್ಸವದ ಉದ್ಘಾಟನೆ**

ಉದ್ಘಾಟಕರು : ಶ್ರೀಮತಿ ಉಷಾ ದೇಸಾಯಿ
ನಿರ್ದೇಶಕರು ಆದ್ಯ ರಂಗಾಚಾರ್ಯ ಪೌಂಡೇಶನ್

ಅಧ್ಯಕ್ಷರು : ಡಾ. (ಶ್ರೀಮತಿ) ಕೆ. ಕಮಲ
ಅಧ್ಯಕ್ಷರು, ಮೈಸೂರು ಅಸೋಸಿಯೇಷನ್, ಮುಂಬೈ

ಸಂಜೆ 7.00ಕ್ಕೆ : "ಮೈಥಿಲಿ" (ಸ್ತ್ರೀ ಸಂವೇದನಾತ್ಮಕ ಪೌರಾಣಿಕ ನಾಟಕ)
ಸ್ಫೂರ್ತಿ ಸಾಂಸ್ಕೃತಿಕ ಸಂಸ್ಥೆ, ಶಿವಮೊಗ್ಗ ತಂಡದವರಿಂದ
ರಚನೆ, ವಿನ್ಯಾಸ, ನಿರ್ದೇಶನ : ಡಾ. ಸಾಸ್ವೇಹಳ್ಳಿ ಸತೀಶ್

ದಿನಾಂಕ 13.02.2016

ಶನಿವಾರ ಸಂಜೆ 7.00ಕ್ಕೆ : "ಚಂದ್ರಗಿರಿ ತೀರದಲ್ಲಿ"
(ಮಹಿಳಾ ಸಂವೇದನೆಯ ಕಲಾತ್ಮಕ ರಂಗಪ್ರಯೋಗ)
ರಂಗಪಯಣ, ಬೆಂಗಳೂರು ತಂಡದವರಿಂದ
ಸಾರಾ ಅಬೂಬಕರ್ ಅವರ ಕಾದಂಬರಿ ಆಧಾರಿತ ನಾಟಕ

ರಂಗರೂಪ : ಶ್ರೀಮತಿ ರೂಪ ಕೋಟೇಶ್ವರ

ನಿರ್ದೇಶನ : ಶ್ರೀಮತಿ ನಯನ ಜೆ. ಸೂಡ

ದಿನಾಂಕ 14.02.2016

ರವಿವಾರ ಸಂಜೆ 6.30ಕ್ಕೆ : "ವ್ಯೂಹ" (ಕನ್ನಡದ ಹೊಸ ಪತ್ತೇದಾರಿ ನಾಟಕ)
ಶಶಿ ಕಲಾವಿದರು (ರಿ) ಬೆಂಗಳೂರು, ತಂಡದವರಿಂದ

ರಚನೆ ಮತ್ತು ನಿರ್ದೇಶನ : ರಂಗಭೂಮಿ, ಕಿರುತೆರೆ ಮತ್ತು ಬೆಳ್ಳಿತೆರೆಗಳಲ್ಲಿ
ಮನೆಮಾತಾಗಿರುವ ನಟ, ಶ್ರೀ ಶ್ರೀನಾಥ ವಸಿಷ್ಠ.

ಸ್ಥಳ :
**ಮೈಸೂರು ಅಸೋಸಿಯೇಷನ್, ಸಭಾಗೃಹ 393, ಭಾಹು ದಾಜಿ ರಸ್ತೆ, ಮಾತುಂಗ (ಪೂ), ಮುಂಬೈ. ದೂ : 022 2402 4647/2403 7065.**

## ಎಲ್ಲರಿಗೂ ಆತ್ಮೀಯ ಸ್ವಾಗತ.

**ಪ್ರಾಯೋಜಕರು :**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಕರ್ನಾಟಕ ಸರಕಾರ.
ಮತ್ತು ಡಾ. (ಶ್ರೀಮತಿ) ಉಷಾ ದೇಸಾಯಿ, ನಿರ್ದೇಶಕರು ಆದ್ಯ ರಂಗಾಚಾರ್ಯ ಪೌಂಡೇಶನ್

## ಮೈಸೂರು ಅಸೋಸಿಯೇಷನ್, ಮುಂಬೈ




ಮೈಸೂರು ಅಸೋಸಿಯೇಷನ್‌ನಲ್ಲಿ ದಿನಾಂಕ 11.02.2016ರ ಗುರುವಾರ ಸಂಜೆ 5.30ಕ್ಕೆ ಮಾಘಿ ಗಣಪತಿ ಪೂಜೆ ಹಾಗೂ ಸತ್ಯನಾರಾಯಣ ಪೂಜೆ ಮತ್ತು ಪ್ರಸಾದ ವಿನಿಯೋಗ ಕಾರ್ಯಕ್ರಮಕ್ಕೆ ತಾವೆಲ್ಲರೂ ಸ್ವಪರಿವಾರ ಸಮೇತರಾಗಿ ಬಂದು ಶ್ರೀ. ಗಣೇಶ ಹಾಗೂ ಶ್ರೀ ಸತ್ಯನಾರಾಯಣನ ಆಶೀರ್ವಾದವನ್ನು ಪಡೆದು ಪ್ರಸಾದವನ್ನು ಸ್ವೀಕರಿಸಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇವೆ. ಪೂಜೆಗೆ ಹೆಸರನ್ನು ನೋಂದಾಯಿಸಲು ಇಚ್ಛಿಸುವವರು ಮುಂಚಿತವಾಗಿ ತಮ್ಮ ಹೆಸರನ್ನು ದೂರವಾಣಿಯ ಮೂಲಕ ಕೂಡ ನೋಂದಾಯಿಸಿ ಕೊಳ್ಳಬಹುದು.

**ದೂರವಾಣಿ : 022 2402 4647 / 2403 7065.**

## Fusion Music

ನಮ್ಮ ಭಾರತೀಯ ಸಂಗೀತ ಕ್ಷೇತ್ರದಲ್ಲಿ ಅನೇಕ ಪ್ರಕಾರದ ಸಂಗೀತ ಕ್ಷೇತ್ರದಲ್ಲಿ ಅನೇಕ ಪ್ರಕಾರದ ಸಂಗೀತ ಶೈಲಿಗಳವೆ, ಕರ್ನಾಟಕದ ಹಿಂದೂಸ್ತಾನಿ, ಗಂಧರ್ವ ಗಾನ, ಸುಗಮ ಸಂಗೀತ,




ಭಾವಗೀತೆ ಹೀಗೆ ಹಲವಾರು. ಇವೆಲ್ಲಕ್ಕೂ ಹೊರತಾದ ಒಂದು ಶೈಲಿ Fusion Music. ಇದು ಒಂದು ರೀತಿಯಲ್ಲಿ ಎರಡು ನಮೂನೆಯ ಸಂಗೀತದ ಒಂದು ಬೆಸುಗೆ ಎನ್ನಬಹುದು. ಇಂತಹ ಒಂದು ಅಪರೂಪದ ಸಂಗೀತ ಕಾರ್ಯಕ್ರಮವನ್ನು ಮೈಸೂರು ಅಸೋಸಿಯೇಷನ್ನಿನಲ್ಲಿ ಜನವರಿ 23 ತಾರೀಖಿನಂದು ಆಯೋಜಿಸಲಾಗಿತ್ತು. ಬೆಂಗಳೂರಿನವರಾದ ಶ್ರೀಮತಿ ಗೀತಾ ನವಲೆ ಅವರಿಂದ. ಶ್ರೀಮತಿ ರಮ ವಸಂತ ಅವರು ಎಲ್ಲರನ್ನೂ ಸ್ವಾಗತಿಸಿ ಕಲಾವಿದರ ಪರಿಚಯವನ್ನು ಮಾಡಿಕೊಟ್ಟರು. ಅಸೋಸಿಯೇಷನ್ನಿನ ಅಧ್ಯಕ್ಷೆ ಶ್ರೀಮತಿ ಕಮಲ ಅವರು ಕಲಾವಿದರನ್ನು ಪುಷ್ಪಗುಚ್ಛ ನೀಡಿ ಗೌರವಿಸಿದ ನಂತರ ಕಛೇರಿಯು ಆರಂಭವಾಯಿತು. ಶ್ರೀಮತಿ ಗೀತಾ ಅವರ ಪತಿ ಶ್ರೀ ಗೋಪಾಲ್ ನವಲೆ ಅವರು ಗಿಟಾರ್ ನಲ್ಲಿ ನೆರವಾದರು. ಶ್ರೀ ರಾಜಕುಮಾರ್ ಅವರು ತವಿಲ್ ನಲ್ಲಿ ಹಾಗೂ ಶ್ರೀ ಯತಿನ್ ಮೊಕಾಶಿಯವರು ತಬಲದಲಿ ನೆರವಾದರು. ಶ್ರೀ ರಾಜಕುಮಾರ್ ಅವರಿಗೆ ತವಿಲ್ (ಢೋಲ್)ನಲ್ಲಿ ಇರುವ ಪ್ರೌಢಿಮೆಗೆ "ಚಕ್ರವರ್ತಿತವಿಲ್" ಬಿರುದು ಸಿಕ್ಕಿದೆ.

ವಾಡಿಕೆಯಂತೆ ಗಣಪತಿ ಸ್ತುತಿಯೊಂದಿಗೆ ಕಛೇರಿಯು ಆರಂಭವಾಯಿತು. ಮಹಾಗಣಪತೇ ಎಂಬ ಮುತ್ತುಸ್ವಾಮಿ ದೀಕ್ಷಿತರ ಕೃತಿ ನಾಟಿರಾಗದಲ್ಲಿ ನಂತರ ಶ್ರೀ ಗೋಪಾಲ್ ನವಲೆ ಅವರು ಗಿಟಾರ್ ನಲ್ಲಿ Blue ಎಂಬ ಪಾಶ್ಚಾತ್ಯ ಶೈಲಿಯ ಸಂಗೀತವನ್ನು ನುಡಿಸಿದರು. ನಂತರ ಶ್ರೀಮತಿ ಗೀತಾ ಅವರು ತ್ಯಾಗರಾಜರ ಚಿರಪರಿಚಿತ ಕೃತಿ "ಚಲ ಮೇಲರ್" ಮಾರ್ಗ ಹಿಂದೋಳ ರಾಗದಲ್ಲಿ, Inner fire ಎಂಬ ಕೃತಿಯ ನಂತರ ಶ್ರೋತೃಗಳ ಕೋರಿಕೆಯ ಮೇರೆಗೆ "ಹಿಂದೋಳ" ರಾಗದಲ್ಲಿ ನುಡಿಸಿದರು. ತ್ಯಾಗರಾಜರ ಅಭೇರಿ ರಾಗದ "ನಗು ಮೋಮು" ಎಲ್ಲರನ್ನೂ ರಂಜಿಸಿತು. ನಂತರ ಪುರಂದರದಾಸರ "ಭಾಗ್ಯದ ಲಕ್ಷ್ಮೀ ಬಾರಮ್ಮ" ಮತ್ತೆ ಕೆಲವು ಸಣ್ಣ ಭಜನಾವಳಿಗಳನ್ನು ನುಡಿಸಿದರು.

ಶ್ರೀ ಗೋಪಾಲ್ ಅವರ ಕೃತಿಗಳು ಪಾಶ್ಚಿಮಾತ್ಯ ಶೈಲಿಯಲ್ಲಿದ್ದರೂ ರಾಗ ಮತ್ತು ತಾಳವನ್ನು ನಮ್ಮ ಕರ್ನಾಟಕ ಶೈಲಿಯಲ್ಲೇ ಅಳವಡಿಸಿದ್ದರು. ಶ್ರೀ ಮಂಜುನಾಥಯ್ಯನವರ ಧನ್ಯವಾದಗಳೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting:10/11th of every month
at Mumbai Patrika Channel Sorting Office G.P.O.



ಅಸೋಸಿಯೇಶನ್‌ನಲ್ಲಿ ಜನವರಿ 26ರಂದು ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.

## ಮೈಸೂರು ಅಸೋಸಿಯೇಷನ್, ಮುಂಬೈ



ಮೈಸೂರು ಅಸೋಸಿಯೇಷನ್‌ನಲ್ಲಿ ದಿನಾಂಕ 07.03.2016ರ' ಸೋಮವಾರ ಸಂಜೆ 5.30ಕ್ಕೆ ಮಹಾಶಿವರಾತ್ರಿ ಪೂಜೆ ಮತ್ತು ಪ್ರಸಾದ ವಿನಿಯೋಗ ಕಾರ್ಯಕ್ರಮಕ್ಕೆ ತಾವೆಲ್ಲರೂ ಸ್ವಪರಿವಾರ ಸಮೇತರಾಗಿ ಬಂದು ಶ್ರೀ ಪರಮೇಶ್ವರನ ಆಶೀರ್ವಾದವನ್ನು ಪಡೆದು ಪ್ರಸಾದವನ್ನು ಸ್ವೀಕರಿಸಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇವೆ. ಪೂಜೆಗೆ ಹೆಸರನ್ನು ನೋಂದಾಯಿಸಲು ಇಚ್ಛಿಸುವವರು ಮುಂಚಿತವಾಗಿ ತಮ್ಮ ಹೆಸರನ್ನು ದೂರವಾಣಿಯು ಮೂಲಕ ಕೂಡ ನೋಂದಾಯಿಸಿ ಕೊಳ್ಳಬಹುದು.


ದೂರವಾಣಿ : 022 2402 4647 / 2403 7065.

ದಿನಾಂಕ 24.01.2016ರಂದು ಅಸೋಸಿಯೇಶನ್‌ನಲ್ಲಿ ನಡೆದ ಮಂಬಾಯಿಯ ಪ್ರತಿಷ್ಠಿತ ಕನ್ನಡ ಶಾಲಾ ಮಕ್ಕಳ ಚಿಣ್ಣರ ಸಾಂಸ್ಕೃತಿಕ ಮೇಳ ಬಹಳ ಯಶಸ್ವಿಯಾಗಿ ನಡೆಯಿತು.









Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938